ಸಂಪುಟ 01 | ಸಂಚಿಕೆ 169 | ಬುಧವಾರ 13 ಮೇ 2026 | ಪುಟ 4 | ಬೆಲೆ-2 ರೂ.

ಇರ್ಫಾನ್ ಕೆ
ಸಂಪಾದಕರು

M A ವಹಾಬ್
ಪ್ರಧಾನ ಸಂಪಾದಕರು

# ನೈಜ್ಯ ದೆಸೆ
NAIJYA DESE

ಸತ್ಯದ ದಿಕ್ಕು TRUE PATH

ಕನ್ನಡ ದಿನ ಪತ್ರಿಕೆ

ಸಿಂಧನೂರು, ಮಸ್ಕಿ ಮಾನ್ವಿ, ಲಿಂಗಸೂರು, ರಾಯಚೂರ,ದೇವದುರ್ಗ ಬಳ್ಳಾರಿ, ಕೊಪ್ಪಳ ಯಾದಗಿರಿ, ಕಲಬುರ್ಗಿ, ಬೀದರ, ವಿಜಯಪುರ. ಗದಗ, ವಿಜಯನಗರ. ಏಕಕಾಲಕ್ಕೆ ಪ್ರಕಟಣೆ

REGIONAL KANNADA DAILY MORNING

RNI code: KNKAN/25/A3581 ಮೋ: 9902277588, 9880707587, 9008787586 naijyadese@gmail.com

## ಈ ದಿನದ ವಿಶೇಷ

1) ರಾಷ್ಟ್ರೀಯ ಸ್ವಾಗತಕಾರರ ದಿನ

ರಾಷ್ಟ್ರೀಯ ಸ್ವಾಗತಕಾರರ ದಿನ , ಮೇ 13, ರಂದು ಆಚರಿಸಲಾಗುತ್ತದೆ. ಪ್ರತಿ ವರ್ಷ ಮೇ ತಿಂಗಳ ಎರಡನೇ ಬುಧವಾರದಂದು ಆಚರಿಸಲಾಗುವ ಈ ದಿನವು ಸ್ವಾಗತಾರ್ಹ ಮೊದಲ ಅನಿಸಿಕೆ ಸೃಷ್ಟಿಸುವಲ್ಲಿ, ಕ್ಲೈಂಟ್ ಹರಿವನ್ನು ನಿರ್ವಹಿಸುವಲ್ಲಿ ಮತ್ತು ಕಚೇರಿ ದಕ್ಷತೆಯನ್ನು ಖಾತ್ರಿಪಡಿಸುವಲ್ಲಿ ಸ್ವಾಗತಕಾರರು ವಹಿಸುವ ಪ್ರಮುಖ ಪಾತ್ರವನ್ನು ಗುರುತಿಸುತ್ತದೆ.

## ಸುಭಾಷಿತ

ಯಾವುದಕ್ಕೂ ಬಾಗದ, ಯಾರಿಗೂ ಮಣಿಯದ
ಅಚಲವಾದ ಮನೋಸ್ಥೈರ್ಯವೇ ದೇಶದ
ಅಥವಾ ವ್ಯಕ್ತಿಯ ನಿಜವಾದ ಶಕ್ತಿ.

–ಮಹಾತ್ಮ ಗಾಂಧೀಜಿ

## ಮೊಬೈಲ್ ಸರಿಸಿ ಪುಸ್ತಕ ಕೊಡಿಸಿ :ಸಮಾಜ ಸೇವಕ ಯಾಸೀನ್ ಸೌದಾಗರ್

ನೈಜ್ಯ ದೆಸೆ ನ್ಯೂಸ್

ಬಳ್ಳಾರಿ ಜಿಲ್ಲೆಯ ಸಿರುಗುಪ್ಪ ತಾಲ್ಲೂಕಿನ ಶಾನವಾಸಪುರದ ಜಾಮಿಯಾ ಮಸೀದಿಯಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಸುಮಾರು 50 ಮಕ್ಕಳಿಗೆ ಪುಸ್ತಕ ಮತ್ತು ಪೆನ್ ವಿತರಿಸಿ ಮಾತನಾಡಿದ ಬಿಜಾಪುರದ ಯಾಸೀನ್ ಸೌದಾಗರ್ ಅವರು ಇಂದಿನ ಕಾಲಘಟ್ಟದಲ್ಲಿ ಮಕ್ಕಳಿಗೆ ಮೊಬೈಲ್ ಇಂದ ದೂರ ಇರಿಸಿ ಪುಸ್ತಕದಿಂದ ಹತ್ತಿರ ಇರಿಸಿ ಮಕ್ಕಳ ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು ಇದರಲ್ಲಿ ಪೋಷಕರ ಪಾತ್ರ ಬಹು ಮುಖ್ಯ ವಾಗಿದೆ ಎಂದು ಹೇಳಿದರು.



ಈ ಕಾರ್ಯಕ್ರಮದಲ್ಲಿ ಮೌಲಾನ ಅಲ್ತಾಫ್, ಮೌಲಾನ ಇಶಾಕ್, ಅಫೀಜ್ ಮುಜಾಮಿಲ್ ,ಕಂಪ್ಲಿ ಅಫಿಜ್ ಸಾಧಿಕ್, ಅಫೀಜ್ ಆರೀಫ್, ಮುಖಂಡರಾದ ಬಳಿಗೇರು ಪೀರಾ ಸಾಬ್, ಹೆಚ್. ಖಾಜಾಸಾಬ್, ಬಿ ಬಷೀರ್ ಸಾಬ್, ಹಮೀದುಲ್ಲಾ, ಮಹಮ್ಮದ್ ರಫಿ ಇದ್ದರು.

## 62 ನೇ ಅಂತರರಾಷ್ಟ್ರೀಯ ದಾದಿಯರ ದಿನ

ನೈಜ್ಯ ದೆಸೆ ನ್ಯೂಸ್

ಸಿರುಗುಪ್ಪ: ಒಳ್ಳೆಯ ನಿರ್ಧಾರ ನಮ್ಮನ್ನು ಅರ್ಧ ಗೆಲ್ಲಿಸಿದರೆ ಪ್ರಯತ್ನ ಮತ್ತು ಪರಿಶ್ರಮ ಇನ್ನರ್ಧ ಗೆಲ್ಲಿಸುತ್ತದೆ ಎಂದು ರಾಷ್ಟ್ರೀಯ ಹಬ್ಬಗಳ ಆಚರಣೆ ಇಂಡಿಯನ್ ರೆಡ್ ಕ್ರಾಸ್ ಸೊಸೈಟಿ ರಾಷ್ಟ್ರೀಯ ಸಾಕ್ಷರತಾ ಶಾಂತಿ ಸಭೆ ಸದಸ್ಯರು ಸಮಾಜ ಸುಧಾರಕ ಅಬ್ದುಲ್ ನಬಿ ಅವರು ಹೇಳಿದರು ಸಿರುಗುಪ್ಪ ನಗರದ ಇಬ್ರಾಹಿಂ ಮಂಜಿಲ್ ನಲ್ಲಿ 62ನೇ ಅಂತರರಾಷ್ಟ್ರೀಯ ದಾದಿಯರ ದಿನವನ್ನು ಗೌರವಿಸಿ ಸ್ಮರಿಸಿ ನೆನಪಿಸಿ ಮಾತನಾಡುತ್ತಾ.



ಆಧುನಿಕ ಮತ್ತು ವೃತ್ತಿಪರ ನರ್ಸಿಂಗ್ ಗೆ ಭಾಷ್ಯ ಬರೆದವರು ಸ್ವತಃ ದಾದಿಯಾಗಿದ್ದ ಸಮಾಜ ಸುಧಾರಕಿ ಇಟಲಿಯ ಫ್ಲಾರೆನ್ಸ್ ನೈಟಿಂಗೆಲ್ 1860 ರಲ್ಲಿಯೇ ಅವರು ಲಂಡನ್ ನ ಸಂತ ಥಾಮಸ್ ಆಸ್ಪತ್ರೆಯಲ್ಲಿ ನರ್ಸಿಂಗ್ ಸ್ಕೂಲ್ ಆರಂಭಿಸಿದ್ದರು ನೈಟಿಂಗೆಲ್ ಸಂಖ್ಯಾಶಾಸ್ತ್ರದಲ್ಲಿಯೂ ಪರಿಣತಿ ಪಡೆದಿದ್ದರು ದಾದಿಯರ ಸೇವೆಯನ್ನು ಸ್ಮರಿಸುವ ಸಲುವಾಗಿ 1965 ರಿಂದ ಪ್ರತಿ ವರ್ಷ ಮೇ 12 ಅನ್ನು ಅಂತರಾಷ್ಟ್ರೀಯ ದಾದಿಯರ ದಿನ ಎಂದು ಆಚರಿಸಲಾಗುತ್ತದೆ ಎಂದು ಸಮಾಜ ಕಾರ್ಯಕರ್ತ ಅಬ್ದುಲ್ ನಬಿ ಅವರು ವಿವರಿಸಿದರು. ವರದಿ :ಮಸೀದಿ, ಅಬ್ದುಲ್ ಗೌಸ್, ಸಿರುಗುಪ್ಪ

ಸನ್ ರೈಸ್ ಕಾಲೇಜಿನಲ್ಲಿ ಅಂತರಾಷ್ಟ್ರೀಯ ನರ್ಸಸ್ ಡೇ ಹಾಗೂ ಪ್ರಥಮ ವರ್ಷದ ವಿದ್ಯಾರ್ಥಿಗಳ ದೀಪ ಬೆಳಗಿಸುವ ಹಾಗೂ ಪ್ರತಿಜ್ಞಾವಿಧಿ ಸ್ವೀಕಾರ ಕಾರ್ಯಕ್ರಮ

# ಮಾನವೀಯ ಮೌಲ್ಯಗಳೊಂದಿಗೆ ನರ್ಸಿಂಗ್ ವೃತ್ತಿಗೆ ಪ್ರವೇಶಿಸಿದ ಸನ್ ರೈಸ್ ಪ್ರಥಮ ವರ್ಷದ ವಿದ್ಯಾರ್ಥಿಗಳು ದೀಪದ ಬೆಳಕಿನಲ್ಲಿ ಸೇವಾ ಪ್ರತಿಜ್ಞೆ



**ಸಿಂಧನೂರು: ಮೇ 12 ಸನ್ ರೈಸ್ ಡಿ ಫಾರ್ಮಸಿ,ನರ್ಸಿಂಗ್, ಪ್ಯಾರಾ ಮೆಡಿಕಲ್ ಕಾಲೇಜಿನಲ್ಲಿ ಅಂತರಾಷ್ಟ್ರೀಯ ನರ್ಸ್ ಡೇ ಅಂಗವಾಗಿ ಪ್ರಥ–'ಮ ವರ್ಷದ ನರ್ಸಿಂಗ್ ವಿದ್ಯಾರ್ಥಿಗಳ ಲ್ಯಾಂಪ್ ಲೈಟಿಂಗ್ ಹಾಗೂ ಪ್ರತಿಜ್ಞಾ ಸ್ವೀಕಾರ ಕಾರ್ಯಕ್ರಮವು ಅತ್ಯಂತ ಗೌರವಪೂರ್ಣ ಹಾಗೂ ಭಾವನಾತ್ಮಕ ವಾತಾವರಣದಲ್ಲಿ ನೆರವೇರಿತು.**

ಕಾರ್ಯಕ್ರಮವನ್ನು ಉದ್ಘಾಟಕರಾದ ಡಾ. ಚನ್ನನಗೌಡ ಪಾಟೀಲ್ ಹಾಗೂ ಗಣ್ಯ ಅತಿಥಿಗಳು ದೀಪ ಬೆಳಗಿಸುವುದರ ಮೂಲಕ ಉದ್ಘಾಟಿಸಿದರು. ಈ ಸಂದರ್ಭದಲ್ಲಿ ನರ್ಸಿಂಗ್ ವೃತ್ತಿಯ ಮಹತ್ವ, ಸೇವಾ ಮನೋಭಾವ ಮತ್ತು ಮಾನವೀಯ ಮೌಲ್ಯಗಳ ಬಗ್ಗೆ ಅವರು ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದರು. ನರ್ಸಿಂಗ್ ವೃತ್ತಿ ಎಂದರೆ ಕೇವಲ ಉದ್ಯೋಗವಲ್ಲ ಅದು ಸೇವೆ, ಕರುಣೆ ಮತ್ತು ಮಾನವೀಯತೆಯ ಜೀವಂತ ರೂಪವಾಗಿದೆ. ಜಗತ್ತಿನಾದ್ಯಂತ ಆರೋಗ್ಯ ಸೇವೆಯ ಹೃದಯವೆಂದೇ ಪರಿಗಣಿಸಲ್ಪಡುವ ನರ್ಸ್‌ಗಳು, ರೋಗಿಯ ನೋವನ್ನು ಕಡಿಮೆ ಮಾಡುವ ದೇವದೂತರಂತೆ ಕಾರ್ಯನಿರ್ವಹಿಸುತ್ತಾರೆ. ವೈದ್ಯಕೀಯ ಕ್ಷೇತ್ರದಲ್ಲಿ ವೈದ್ಯರು ಚಿಕಿತ್ಸೆ ನೀಡಿದರೆ, ನರ್ಸ್‌ಗಳು ಪ್ರೀತಿ, ಸಹನೆ ಮತ್ತು ಆರೈಕೆಯ ಮೂಲಕ ರೋಗಿಗೆ ಜೀವದ ಧೈರ್ಯ ನೀಡುತ್ತಾರೆ.

ಎಂದರು ಇಂದು ನಡೆಯುತ್ತಿರುವ ಲ್ಯಾಂಪ್ ಲೈಟಿಂಗ್ ಸಮಾರಂಭವು ನಿಮ್ಮ ಜೀವನದ ಅತ್ಯಂತ ಪವಿತ್ರ ಕ್ಷಣವಾಗಿದೆ. ದೀಪದ ಬೆಳಕು ಕೇವಲ ಜ್ಯೋತಿ ಅಲ್ಲ ಅದು ಜ್ಞಾನ, ಸೇವಾ ಮನೋಭಾವ ಮತ್ತು ಜವಾಬ್ದಾರಿಯ ಸಂಕೇತವಾಗಿದೆ. ನೀವು ಹಚ್ಚುವ ಈ ದೀಪವು ಮಾನವ ಸೇವೆಯ ದಾರಿಯಲ್ಲಿ ನಿಮ್ಮನ್ನು ಸದಾ ಮಾರ್ಗದರ್ಶನ ಮಾಡಲಿ. ಎಂದರು ಲ್ಯಾಂಪ್ ಲೈಟಿಂಗ್ ಸಮಾರಂಭವು ನರ್ಸಿಂಗ್ ವಿದ್ಯಾರ್ಥಿಗಳ ಜೀವನದ ಮಹತ್ವದ ಘಟ್ಟವಾಗಿದ್ದು, ವೈದ್ಯಕೀಯ ಸೇವೆಯ ಪವಿತ್ರ ಪ್ರವೇಶದ ಸಂಕೇತವೆಂದು ಪರಿಗಣಿಸಲಾಗುತ್ತದೆ. ಪ್ರಥಮ ವರ್ಷದ ವಿದ್ಯಾರ್ಥಿಗಳು ದೀಪ ಹಚ್ಚುವ ಮೂಲಕ ಸೇವಾ ಮನೋಭಾವದ ಆರಂಭ ಮಾನವೀಯತೆ ಮತ್ತು ಕರುಣೆಯ ಪ್ರತಿಜ್ಞೆ ರೋಗಿಗಳ ಆರೈಕೆಗೆ ಜೀವನ ಸಮರ್ಪಿಸುವ ಸಂಕಲ್ಪ ಎಂಬ ಸಂದೇಶವನ್ನು ಸಾರಿದರು...

ನಂತರ ಕಾರ್ಯಕ್ರಮದ ಪ್ರಮುಖ ಅಂಗವಾಗಿ ಪ್ರಥಮ ವರ್ಷದ ನರ್ಸಿಂಗ್ ವಿದ್ಯಾರ್ಥಿಗಳು ಪ್ರತಿಜ್ಞಾವಿಧಿಯನ್ನು ಅತ್ಯಂತ ಗೌರವಭಾವದಿಂದ ಸ್ವೀಕರಿಸಿದರು. ಲ್ಯಾಂಪ್ ಲೈಟಿಂಗ್ ಸಮಾರಂಭದ ನಂತರ ವಿದ್ಯಾರ್ಥಿಗಳು ನರ್ಸಿಂಗ್ ವೃತ್ತಿಯ ಪವಿತ್ರತೆಯನ್ನು ಮನದಟ್ಟುಗೊಳಿಸಿಕೊಂಡು ಸೇವಾ ಸಂಕಲ್ಪವನ್ನು ಘೋಷಿಸಿದರು. ಪ್ರತಿಜ್ಞಾವಿಧಿ ಸ್ವೀಕಾರದ ಸಂದರ್ಭದಲ್ಲಿ ವಿದ್ಯಾರ್ಥಿಗಳು ರೋಗಿಗಳ ಆರೈಕೆಯನ್ನು ತಮ್ಮ ಪ್ರಮುಖ ಕರ್ತವ್ಯವೆಂದು ಪಾಲಿಸುವುದು ಮಾನವೀಯತೆ, ಕರುಣೆ ಹಾಗೂ ಸಹಾನುಭೂತಿಯೊಂದಿಗೆ ಸೇವೆ ಸಲ್ಲಿಸುವುದು ವೃತ್ತಿನೈತಿಕ ಮೌಲ್ಯಗಳನ್ನು ಕಟ್ಟುನಿಟ್ಟಾಗಿ ಅನುಸರಿಸುವುದು ಸಮಾಜದ ಆರೋಗ್ಯ ರಕ್ಷಣೆಗೆ ಸಮರ್ಪಿತವಾಗಿ ಕಾರ್ಯನಿರ್ವಹಿಸುವುದು ಎಂಬ ಸಂಕಲ್ಪಗಳನ್ನು ಸ್ವೀಕರಿಸಿದರು.

ಈ ಪ್ರತಿಜ್ಞಾವಿಧಿ ಕಾರ್ಯಕ್ರಮವು ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವವನ್ನು ಮತ್ತಷ್ಟು ಬಲಪಡಿಸುವುದರ ಜೊತೆಗೆ ನರ್ಸಿಂಗ್ ವೃತ್ತಿಗೆ ಅಧಿಕೃತವಾಗಿ ಪ್ರವೇಶಿಸುವ ಮಹತ್ವದ ಕ್ಷಣವಾಗಿ ಗುರುತಿಸಲ್ಪಟ್ಟಿತು. , ರೋಗಿಗಳ ಆರೈಕೆಯನ್ನು ಕರ್ತವ್ಯ ಮಾತ್ರವಲ್ಲ, ಸೇವಾ ಧರ್ಮವೆಂದು ಸ್ವೀಕರಿಸುವ ಬದ್ಧತೆಯನ್ನು ವ್ಯಕ್ತಪಡಿಸಿದರು...... ನಂತರ ಹಿರಿಯ ನರ್ಸಿಂಗ್ ಆಫೀಸರ್ ಗುರು ಶಾಂತಮ್ಮ ಅವರು ಕೇಕ್ ಕಟ್ ಮಾಡುವುದರ ಮೂಲಕ ತಮ್ಮ 26 ವರ್ಷದ ಸಮರ್ಪಿತ ಸೇವೆಯನ್ನು ಸ್ಮರಿಸಿದರು. ಆರೋಗ್ಯ ಸೇವಾ ಕ್ಷೇತ್ರದಲ್ಲಿ ದೀರ್ಘಕಾಲದಿಂದ ನಿರಂತರವಾಗಿ ಸೇವೆ ಸಲ್ಲಿಸುತ್ತಿರುವ ಅವರು, ನರ್ಸಿಂಗ್ ವೃತ್ತಿಯ ನಿಷ್ಠೆ, ಕರುಣೆ ಹಾಗೂ ಮಾನವೀಯ ಮೌಲ್ಯಗಳ ಪ್ರತಿರೂಪವಾಗಿದ್ದಾರೆ.

ಈ ಸಂದರ್ಭದಲ್ಲಿ ಉಪಸ್ಥಿತರಿದ್ದ ಗಣ್ಯರು ಹಾಗೂ ವಿದ್ಯಾರ್ಥಿಗಳು ಅವರ ಸೇವಾ ಜೀವನವನ್ನು ಅಭಿನಂದಿಸಿ ಗೌರವ ಸಲ್ಲಿಸಿದರು. ತಮ್ಮ ಅನುಭವಗಳನ್ನು ಹಂಚಿಕೊಂಡ ಅವರು, ನರ್ಸಿಂಗ್ ವೃತ್ತಿಯಲ್ಲಿ ಸೇವಾ ಮನೋಭಾವ, ತಾಳ್ಮೆ ಮತ್ತು ರೋಗಿಗಳ ಪ್ರೀತಿಯೇ ನಿಜವಾದ ಯಶಸ್ಸಿನ ಮಾರ್ಗವೆಂದು ತಿಳಿಸಿದರು. ಅವರ 26 ವರ್ಷದ ಸೇವಾ ಪಯಣ ಹೊಸ ತಲೆಮಾರದ ನರ್ಸಿಂಗ್ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿ ಪರಿಣಮಿಸಿತು. ಈ ಕ್ಷಣ ಕಾರ್ಯಕ್ರಮಕ್ಕೆ ಮತ್ತಷ್ಟು ಭಾವನಾತ್ಮಕ ಹಾಗೂ ಸ್ಮರಣೀಯ ಮೆರಗು ತಂದಿತು.... ನಂತರ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ರಾಯಚೂರು ಜಿಲ್ಲೆಗೆ ಪ್ರಥಮ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಗೌರವಿಸುವ ಸಲುವಾಗಿ ವಿಶೇಷ ಸನ್ಮಾನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಈ ಸಂದರ್ಭದಲ್ಲಿ. ವಿದ್ಯಾರ್ಥಿನಿ ನಯನ ಅವರಿಗೆ ಶೈಕ್ಷಣಿಕ ಸಾಧನೆಗೆ ಸಂಸ್ಥೆಯ ಪರವಾಗಿ ಗೌರವಪೂರ್ವಕವಾಗಿ ಸನ್ಮಾನ ಸಲ್ಲಿಸಲಾಯಿತು. ಗಣ್ಯರು ಶಾಲು, ಫಲಕ ಹಾಗೂ ಸ್ಮರಣಿಕೆಯನ್ನು ನೀಡಿ ಅಭಿನಂದನೆ ಸಲ್ಲಿಸಿ, ಅವರ ಪರಿಶ್ರಮ, ಶಿಸ್ತು ಮತ್ತು ನಿರಂತರ ಅಧ್ಯಯನ ಮನೋಭಾವವನ್ನು ಶ್ಲಾಘಿಸಿದರು. ವಿದ್ಯಾರ್ಥಿನಿ ನಯನ ಅವರ ಸಾಧನೆ ಇತರೆ ವಿದ್ಯಾರ್ಥಿಗಳಿಗೆ ಪ್ರೇರಣೆಯಾಗಿದ್ದು, ಶೈಕ್ಷಣಿಕ ಕ್ಷೇತ್ರದಲ್ಲಿ ಮತ್ತಷ್ಟು ಸಾಧನೆ ಮಾಡಲು ಯುವಜನತೆಗೆ ಉತ್ತೇಜನ ನೀಡುವಂತಾಯಿತು....ನಂತರ ನರ್ಸಿಂಗ್ ದಿನಾಚರಣೆಯ ಅಂಗವಾಗಿ ಆಯೋಜಿಸಲಾದ ವಿವಿಧ ಕ್ರೀಡಾಕೂಟಗಳಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣಾ ಕಾರ್ಯಕ್ರಮ ನಡೆಯಿತು. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಹಾಗೂ ಸ್ಮರಣಿಕೆಗಳನ್ನು ನೀಡಿ ಗೌರವಿಸಲಾಯಿತು. ಇದರಿಂದ ವಿದ್ಯಾರ್ಥಿಗಳಲ್ಲಿ ತಂಡಭಾವನೆ, ಆರೋಗ್ಯಕರ ಸ್ಪರ್ಧಾತ್ಮಕ ಮನೋಭಾವ ಹಾಗೂ ಉತ್ಸಾಹ ಹೆಚ್ಚಾಯಿತು..... ನಂತರ ವಕೀಲರ ಸಂಘದ ಅಧ್ಯಕ್ಷರಾದ ಭೀಮನಗೌಡ ಸರ್ ಅವರು ಮಾತನಾಡಿ ಅಂತರಾಷ್ಟ್ರೀಯ ನರ್ಸ್ ದಿನಾಚರಣೆಯ ಮಹತ್ವವನ್ನು ವಿವರಿಸಿದರು.

ನರ್ಸಿಂಗ್ ವೃತ್ತಿ ಸಮಾಜದ ಆರೋಗ್ಯ ರಕ್ಷಣೆಯ ಪ್ರಮುಖ ಆಧಾರವಾಗಿದ್ದು, ನರ್ಸ್‌ಗಳು ರೋಗಿಗಳ ಸೇವೆಯಲ್ಲಿ ತೋರಿಸುವ ಕರುಣೆ, ಸಹಾನುಭೂತಿ ಮತ್ತು ತ್ಯಾಗಭಾವ ಅಪಾರವೆಂದು ಅವರು ಅಭಿಪ್ರಾಯಪಟ್ಟರು. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಮಾನಸಿಕ ಧೈರ್ಯ ಹಾಗೂ ಆತ್ಮವಿಶ್ವಾಸ ತುಂಬುವಲ್ಲಿ ನರ್ಸ್‌ಗಳ ಪಾತ್ರ ಅತ್ಯಂತ ಮಹತ್ತರವಾಗಿದೆ ಎಂದು ಹೇಳಿದರು. ನರ್ಸ್‌ಗಳು ಕೇವಲ ವೈದ್ಯಕೀಯ ಸಹಾಯಕರು ಅಲ್ಲ, ಮಾನವೀಯ ಮೌಲ್ಯಗಳನ್ನು ಜೀವಂತವಾಗಿಡುವ ಸೇವಕರು ಎಂದು ತಿಳಿಸಿದ ಅವರು, ಸಮಾಜವು ನರ್ಸಿಂಗ್ ವೃತ್ತಿಗೆ ಹೆಚ್ಚಿನ ಗೌರವ ನೀಡಬೇಕು ಎಂದು ಕರೆ ನೀಡಿದರು.

ಹೊಸ ತಲೆಮಾರದ ನರ್ಸಿಂಗ್ ವಿದ್ಯಾರ್ಥಿಗಳು ಸೇವಾ ಮನೋಭಾವ, ಶಿಸ್ತು ಮತ್ತು ನೈತಿಕತೆಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಆರೋಗ್ಯ ಸೇವಕರಾಗಬೇಕು ಎಂದು ಸಲಹೆ ನೀಡಿದರು.... ನಂತರ ಮಾತನಾಡಿದ ಪತ್ರಕರ್ತರಾದ ಚಂದ್ರಶೇಖರ್ ಬೆನ್ನೂರ್ ಅವರು ಮಾತನಾಡಿ ಅಂತರಾಷ್ಟ್ರೀಯ ನರ್ಸ್ ದಿನದ ಮಹತ್ವವನ್ನು ವಿವರಿಸಿದರು. ನರ್ಸಿಂಗ್ ವೃತ್ತಿ ಸಮಾಜದ ಆರೋಗ್ಯ ವ್ಯವಸ್ಥೆಯ ಪ್ರಮುಖ ಸ್ತಂಭವಾಗಿದ್ದು, ನರ್ಸ್‌ಗಳು ಹಗಲು–ರಾತ್ರಿ ಎಂಬ ಭೇದವಿಲ್ಲದೆ ರೋಗಿಗಳ ಸೇವೆಯಲ್ಲಿ ತೊಡಗಿರುವ ನಿಸ್ವಾರ್ಥ ಸೇವಕರು ಎಂದು ಅವರು ಹೇಳಿದರು. ರೋಗಿಯ ನೋವನ್ನು ತಮ್ಮದೇ ನೋವಿನಂತೆ ಅರ್ಥಮಾಡಿಕೊಂಡು ಸೇವೆ ಸಲ್ಲಿಸುವುದು ನರ್ಸ್ ವೃತ್ತಿಯ ಮಹತ್ವವನ್ನು ಮತ್ತಷ್ಟು ಹೆಚ್ಚಿಸುತ್ತದೆ ಎಂದು ಅಭಿಪ್ರಾಯಪಟ್ಟರು.

ಕೊವಿಡ್ ಸೇರಿದಂತೆ ಸಂಕಷ್ಟದ ಸಂದರ್ಭಗಳಲ್ಲಿ ನರ್ಸ್‌ಗಳು ತೋರಿದ ಧೈರ್ಯ, ತ್ಯಾಗ ಮತ್ತು ಸೇವಾ ಮನೋಭಾವವನ್ನು ಸಮಾಜ ಎಂದಿಗೂ ಮರೆಯಲಾರದು ಎಂದು ಅವರು ತಿಳಿಸಿದರು. ಯುವ ನರ್ಸಿಂಗ್ ವಿದ್ಯಾರ್ಥಿಗಳು ಮಾನವೀಯತೆ, ಶಿಸ್ತು ಮತ್ತು ಕರ್ತವ್ಯನಿಷ್ಠೆಯನ್ನು ತಮ್ಮ ಜೀವನದ ಮೌಲ್ಯಗಳಾಗಿ ಅಳವಡಿಸಿಕೊಳ್ಳಬೇಕು ಎಂದು ಸಲಹೆ ನೀಡಿದರು.... ನಂತರ ಶ್ರೀ ಬಸವೇಶ್ವರ ಸಂಯುಕ್ತ ಪ್ರೌಢ ಶಾಲೆಯ ನಿವೃತ್ತ ಶಿಕ್ಷಕರಾದ ಮಹಾಂತೇಶ್ ಅವರು ಮಾತನಾಡಿ. ನರ್ಸಿಂಗ್ ವೃತ್ತಿ ಸಮಾಜ ಸೇವೆಯ ಅತ್ಯುನ್ನತ ರೂಪವಾಗಿದ್ದು, ನರ್ಸ್‌ಗಳು ರೋಗಿಗಳ ನೋವನ್ನು ಕಡಿಮೆ ಮಾಡುವಲ್ಲಿ ತಾಯಿ ಮಮತೆಯಂತೆ ಆರೈಕೆ ನೀಡುತ್ತಾರೆ ಎಂದು ಅವರು ಅಭಿಪ್ರಾಯಪಟ್ಟರು.

ಆರೋಗ್ಯ ಕ್ಷೇತ್ರದಲ್ಲಿ ನರ್ಸ್‌ಗಳ ಸೇವೆ ಮಾನವೀಯತೆ, ಸಹಾನುಭೂತಿ ಹಾಗೂ









ತ್ಯಾಗದ ಪ್ರತೀಕವಾಗಿದೆ ಎಂದು ಹೇಳಿದರು. ಶಿಕ್ಷಣದ ಜೊತೆಗೆ ಉತ್ತಮ ಸಂಸ್ಕಾರ ಹಾಗೂ ಮಾನವೀಯ ಮೌಲ್ಯಗಳನ್ನು ಅಳವಡಿಸಿಕೊಂಡಾಗ ಮಾತ್ರ ಒಬ್ಬ ನರ್ಸ್ ಸಂಪೂರ್ಣ ಆರೋಗ್ಯ ಸೇವಕರಾಗಲು ಸಾಧ್ಯ ಎಂದು ಅವರು ವಿದ್ಯಾರ್ಥಿಗಳಿಗೆ ಸಲಹೆ ನೀಡಿದರು. ನರ್ಸಿಂಗ್ ವೃತ್ತಿ ಸಮಾಜದ ನಂಬಿಕೆ ಮತ್ತು ಗೌರವವನ್ನು ಪಡೆದಿರುವ ಪವಿತ್ರ ಸೇವೆಯಾಗಿದ್ದು, ವಿದ್ಯಾರ್ಥಿಗಳು ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿರ್ವಹಿಸಬೇಕು ಎಂದು ಕರೆ ನೀಡಿದರು.."ನಮ್ಮ ಶಿಷ್ಯರು ಸಿಂಧನೂರು ಪಟ್ಟಣದಲ್ಲಿ ಸನ್ ರೈಸ್ ಶಿಕ್ಷಣ ಸಂಸ್ಥೆಯನ್ನು ಕಟ್ಟಿ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿರುವುದು ಅತ್ಯಂತ ಸಂತೋಷದ ವಿಷಯವಾಗಿದೆ" ಎಂದು ಅಭಿಪ್ರಾಯಪಟ್ಟರು.

ಗ್ರಾಮೀಣ ಹಾಗೂ ಹಿಂದುಳಿದ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ನೀಡುವ ಉದ್ದೇಶದಿಂದ ಸಂಸ್ಥೆ ಬೆಳೆಯುತ್ತಿರುವುದು ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆಯಾಗಿದೆ ಎಂದು ಅವರು ಹೇಳಿದರು. ಶಿಕ್ಷಣ ಸಂಸ್ಥೆಗಳು ಸಮಾಜ ಪರಿವರ್ತನೆಯ ಕೇಂದ್ರಗಳಾಗಿದ್ದು, ಇಂತಹ ಸಂಸ್ಥೆಗಳ ಬೆಳವಣಿಗೆ ಯುವಜನತೆಗೆ ಹೊಸ ಭವಿಷ್ಯ ನಿರ್ಮಾಣದ ದಾರಿಯನ್ನು ತೆರೆದಿದೆ ಎಂದು ಶ್ಲಾಘಿಸಿದರು....ನಂತರ ಜಮಾತೆ ಇಸ್ಲಾಮಿ ಹಿಂದ ಸಂಘಟನೆಯ ಅಧ್ಯಕ್ಷ ಶ್ರೀ ಹುಸೇನ್ ಸಾಬ್ ಅವರು ಮಾತನಾಡಿ ನರ್ಸಿಂಗ್ ವೃತ್ತಿ ಮಾನವ ಸೇವೆಯ ಅತ್ಯಂತ ಪವಿತ್ರ ಕ್ಷೇತ್ರವಾಗಿದ್ದು, ರೋಗಿಗಳ ಸೇವೆ ಮಾಡುವುದೇ ದೇವರ ಸೇವೆಯಂತಾಗಿದೆ ಎಂದು ಅವರು ಹೇಳಿದರು.

ಸಮಾಜದಲ್ಲಿ ಆರೋಗ್ಯ ರಕ್ಷಣೆಗಾಗಿ ನರ್ಸ್‌ಗಳು ಸಲ್ಲಿಸುತ್ತಿರುವ ಸೇವೆ ಅಪಾರವಾಗಿದ್ದು, ಅವರ ತ್ಯಾಗ, ಸಹನೆ ಮತ್ತು ಕರುಣೆಯ ಮನೋಭಾವ ಎಲ್ಲರಿಗೂ ಮಾದರಿಯಾಗಿದೆ ಎಂದು ಅಭಿಪ್ರಾಯಪಟ್ಟರು. ಜಾತಿ, ಧರ್ಮ, ಭಾಷೆ ಎಂಬ ಭೇದವಿಲ್ಲದೆ ಪ್ರತಿಯೊಬ್ಬ ರೋಗಿಗೆ ಸಮಾನ ಸೇವೆ ನೀಡುವ ನರ್ಸ್‌ಗಳು ಮಾನವೀಯತೆಯ ನಿಜವಾದ ಪ್ರತಿನಿಧಿಗಳಾಗಿದ್ದಾರೆ ಎಂದು ಹೇಳಿದರು. ಯುವ ನರ್ಸಿಂಗ್ ವಿದ್ಯಾರ್ಥಿಗಳು ಸೇವಾ ಮನೋಭಾವವನ್ನು ಜೀವನದ ಧ್ಯೆಯವಾಗಿಸಿಕೊಂಡು ಸಮಾಜದ ಆರೋಗ್ಯ ಅಭಿವೃದ್ಧಿಗೆ ತಮ್ಮ ಕೊಡುಗೆ ನೀಡಬೇಕು ಎಂದು ಸಲಹೆ ನೀಡಿದರು. ಅಂತರಾಷ್ಟ್ರೀಯ ನರ್ಸ್ ಡೇ ಆಚರಣೆ ನರ್ಸ್‌ಗಳ ಅಮೂಲ್ಯ ಸೇವೆಯನ್ನು ಸ್ಮರಿಸುವುದರ ಜೊತೆಗೆ ಸಮಾಜದಲ್ಲಿ ಸೇವಾ ಮೌಲ್ಯಗಳನ್ನು ಬಲಪಡಿಸುವ ಮಹತ್ವದ ದಿನವಾಗಿದೆ ಎಂದು ಅವರು ತಿಳಿಸಿದರು... ನಂತರ ಸರ್ಕಾರಿ ಬಾಲಕರ ಪದವಿ ಪೂರ್ವ ಕಾಲೇಜಿನ ಪ್ರಾಚಾರ್ಯ ಅವರು ಮಾತನಾಡಿ ನರ್ಸಿಂಗ್ ವೃತ್ತಿ ಸಮಾಜದ ಆರೋಗ್ಯ ವ್ಯವಸ್ಥೆಯಲ್ಲಿ ಅತ್ಯಂತ ಮಹತ್ವದ ಸ್ಥಾನವನ್ನು ಹೊಂದಿದ್ದು, ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವ, ಶಿಸ್ತು ಹಾಗೂ ಮಾನವೀಯ ಮೌಲ್ಯಗಳನ್ನು ಬೆಳೆಸುವಂತಹ ಕಾರ್ಯಕ್ರಮಗಳನ್ನು ಆಯೋಜಿಸಿರುವುದು ಶ್ಲಾಘನೀಯ ಎಂದು ಹೇಳಿದರು.









ಲ್ಯಾಂಪ್ ಲೈಟಿಂಗ್ ಹಾಗೂ ಪ್ರತಿಜ್ಞಾವಿಧಿ ಕಾರ್ಯಕ್ರಮವು ವಿದ್ಯಾರ್ಥಿಗಳ ವೃತ್ತಿ ಜೀವನಕ್ಕೆ ಉತ್ತಮ ದಿಕ್ಕು ನೀಡುವ ಮಹತ್ವದ ಹೆಜ್ಜೆಯಾಗಿದೆ ಎಂದು ಅಭಿಪ್ರಾಯಪಟ್ಟರು. ಸನ್ ರೈಸ್ ಶಿಕ್ಷಣ ಸಂಸ್ಥೆ ಶಿಕ್ಷಣ ಹಾಗೂ ಆರೋಗ್ಯ ಕ್ಷೇತ್ರಗಳಲ್ಲಿ ಉತ್ತಮ ಸೇವೆ ಸಲ್ಲಿಸುತ್ತಿದ್ದು, ಗ್ರಾಮೀಣ ಭಾಗದ ವಿದ್ಯಾರ್ಥಿಗಳಿಗೆ ಉತ್ತಮ ಅವಕಾಶಗಳನ್ನು ಕಲ್ಪಿಸುತ್ತಿರುವುದು ಸಂತೋಷದ ವಿಷಯವಾಗಿದೆ ಎಂದು ಅವರು ಮೆಚ್ಚುಗೆ ವ್ಯಕ್ತಪಡಿಸಿದರು... ನಂತರ ಸ್ವಾಮಿ ವಿವೇಕಾನಂದ ಆಯುರ್ವೇದಿಕ್ ಮೆಡಿಕಲ್ ಕಾಲೇಜು ಲಿಂಗಸ್ಗೂರಿನ ಅಧ್ಯಕ್ಷ ಶಾಂತನಗೌಡ ಪಾಟೀಲ್ ಅವರು ಮಾತನಾಡಿ ಸನ್ ರೈಸ್ ಶಿಕ್ಷಣ ಸಂಸ್ಥೆಯ ಬೆಳವಣಿಗೆ ಕುರಿತು ಪ್ರಶಂಸೆ ವ್ಯಕ್ತಪಡಿಸಿದರು.

ಸನ್ ರೈಸ್ ಸಂಸ್ಥೆಯ ಅಧ್ಯಕ್ಷರಾದ ತಮ್ಮ ಗೆಳೆಯ ಇರ್ಫಾನ್ ಅವರು ಪರಿಶ್ರಮಿ, ಅವರ. ಕಠಿಣ ಪರಿಶ್ರಮ, ನಿಷ್ಠೆ ಹಾಗೂ ಶಿಕ್ಷಣದ ಮೇಲಿನ ಬದ್ಧತೆಯಿಂದ ಸಂಸ್ಥೆಯನ್ನು ಬೆಳೆಸುತ್ತಿರುವುದು ಶ್ಲಾಘನೀಯ ಸಾಧನೆಯಾಗಿದೆ ಎಂದು ಅಭಿಪ್ರಾಯಪಟ್ಟರು. ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಗುಣಮಟ್ಟದ ಶಿಕ್ಷಣ ಹಾಗೂ ಆರೋಗ್ಯ ಸೇವಾ ಶಿಕ್ಷಣವನ್ನು ಒದಗಿಸುವ ಉದ್ದೇಶದಿಂದ ಸಂಸ್ಥೆ ಕಾರ್ಯನಿರ್ವಹಿಸುತ್ತಿರುವುದು ಸಮಾಜದ ಅಭಿವೃದ್ಧಿಗೆ ಮಹತ್ವದ ಕೊಡುಗೆಯಾಗಿದೆ ಎಂದು ಅವರು ಹೇಳಿದರು. ಯುವಜನತೆಗೆ ಉತ್ತಮ ಭವಿಷ್ಯ ನಿರ್ಮಾಣ ಮಾಡುವ ಶಿಕ್ಷಣ ಸಂಸ್ಥೆಗಳು ಸಮಾಜದ ನಿಜವಾದ ಶಕ್ತಿಯಾಗಿದ್ದು, ಸನ್ ರೈಸ್ ಸಂಸ್ಥೆ ಅದಕ್ಕೆ ಉತ್ತಮ ಉದಾಹರಣೆಯಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಸಂಸ್ಥೆಯ ಅಧ್ಯಕ್ಷ ಇರ್ಫಾನ್ ಅವರ ಪರಿಶ್ರಮದಿಂದ ಮುಂದಿನ ದಿನಗಳಲ್ಲಿ ಸಂಸ್ಥೆ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ ಎಂದು ಹಾರೈಸಿದರು.ಗುರು–ಶಿಷ್ಯರ ಸಂಬಂಧದ ಮಹತ್ವವನ್ನು ವಿವರಿಸಿದರು. ಗುರು ಮತ್ತು ಶಿಷ್ಯರ ಸಂಬಂಧವು ಭಾರತೀಯ ಸಂಸ್ಕೃತಿಯ ಅಮೂಲ್ಯ ಪರಂಪರೆಯಾಗಿದ್ದು, ಶಿಕ್ಷಣವೆಂದರೆ ಕೇವಲ ಪಾಠ ಕಲಿಸುವುದಲ್ಲ, ವ್ಯಕ್ತಿತ್ವ ನಿರ್ಮಾಣ ಮಾಡುವ ಪವಿತ್ರ ಪ್ರಕ್ರಿಯೆಯಾಗಿದೆ ಎಂದು ಹೇಳಿದರು. ಒಬ್ಬ ಉತ್ತಮ ಗುರು ವಿದ್ಯಾರ್ಥಿಗೆ ಜ್ಞಾನ ಮಾತ್ರವಲ್ಲ, ಜೀವನ ಮೌಲ್ಯಗಳು, ಶಿಸ್ತು ಹಾಗೂ ಸೇವಾ ಮನೋಭಾವವನ್ನು ನೀಡುತ್ತಾರೆ ಎಂದು ಅಭಿಪ್ರಾಯಪಟ್ಟರು. ಶಿಷ್ಯರು ಗುರುಗಳ ಮಾರ್ಗದರ್ಶನವನ್ನು ಗೌರವಿಸಿ ಜೀವನದಲ್ಲಿ ಅಳವಡಿಸಿಕೊಂಡಾಗ ಸಮಾಜಕ್ಕೆ ಉತ್ತಮ ನಾಗರಿಕರು ರೂಪುಗೊಳ್ಳುತ್ತಾರೆ ಎಂದು ತಿಳಿಸಿದರು.

ಗುರುಗಳ ಆಶೀರ್ವಾದ ಮತ್ತು ಶಿಷ್ಯರ ಪರಿಶ್ರಮ ಒಂದಾಗಿದಾಗ ಯಶಸ್ಸು ಖಚಿತವಾಗುತ್ತದೆ ಎಂದು ಅವರು ಹೇಳಿದರು. ಸನ್ ರೈಸ್ ಶಿಕ್ಷಣ ಸಂಸ್ಥೆಯಲ್ಲಿ ಗುರು–ಶಿಷ್ಯ ಪರಂಪರೆ ಉತ್ತಮವಾಗಿ ಬೆಳೆಯುತ್ತಿರುವುದು ಸಂತೋಷದ ವಿಷಯವಾಗಿದ್ದು, ಇಂತಹ ಶಿಕ್ಷಣ ವಾತಾವರಣವು ಸಮಾಜದ ಅಭಿವೃದ್ಧಿಗೆ ದಾರಿ ಮಾಡಿಕೊಡುತ್ತದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.... ನಂತರ ಸಂಸ್ಥೆಯ ಅಧ್ಯಕ್ಷರಾದ ಇರ್ಫಾನ್ಕೆಯವರು ಅಧ್ಯಕ್ಷೀಯ ಭಾಷಣದಲ್ಲಿ. ಲ್ಯಾಂಪ್ ಲೈಟಿಂಗ್ ಮೂಲಕ ಸ್ವೀಕರಿಸುವ ದೀಪವು ಕೇವಲ ಬೆಳಕು ಅಲ್ಲ ಅದು ಜವಾಬ್ದಾರಿ, ಶಿಸ್ತು ಹಾಗೂ ಸೇವಾ ಸಂಕಲ್ಪದ ಪ್ರತೀಕವಾಗಿದೆ. ಈ ದೀಪ ನಿಮ್ಮ ಜೀವನದಲ್ಲಿ ಸದಾ ಮಾನವ ಸೇವೆಯ ಮಾರ್ಗವನ್ನು ಬೆಳಗಿಸಲಿ. ಆರೋಗ್ಯ ಕ್ಷೇತ್ರದಲ್ಲಿ ನರ್ಸಿಂಗ್ ಸೇವೆಯ ಪಾತ್ರ ಅತ್ಯಂತ ಮಹತ್ತರವಾಗಿದೆ.

ಆಸ್ಪತ್ರೆಗಳ ಹೃದಯವೇ ನರ್ಸ್ ಎಂದು ಹೇಳಬಹುದು. ನಿಮ್ಮ ಸೇವೆಯಿಂದ

## ಸಾಹಿತ್ಯ ಸಿಂಚನ

ತಿಳಿ ಸಂಜೆ

ತಿಳಿ ಸಂಜೆಯ ಹೊಂಗಿರಣದಲ್ಲಿ,
ಮನಸು ಮೆಲ್ಲಗೆ ಕರಗುತಿದೆ
ಬಿಸಿಲಿನ ಆಯಾಸ ಇಳಿದಂತೆ,
ತಂಗಾಳಿ ಹಾಡು ಹೇಳತಿದೆ

ದೂರದ ಗುಡಿಯ ಗಂಟೆ ಸದ್ದು,
ಪಕ್ಷಿಯ ಗೂಡಿನೆಡೆ ಪಯಣ,
ಕೈಯಲ್ಲಿ ಕಾಫಿ, ಕಣ್ಣಲ್ಲಿ ಕನಸು,
ಈ ಕ್ಷಣವೇ ಸ್ವರ್ಗದ ಸವಿನೆನಪು

ದಿನದ ಗಡಿಬಿಡಿ ಮರೆತು ಬಿಡು,
ನಿನ್ನ ಉಸಿರನ್ನು ಕೇಳು ಒಮ್ಮೆ,
ಸೂರ್ಯನು ಕೂಡ ಸುಸ್ತಾಗಿ,
ಕೆಂಪಾಗಿ ಮಲಗುವನು ಇಮ್ಮೆ (ಈ ಕ್ಷಣ)

ತಿಳಿ ಸಂಜೆಯೇ, ನೀ ಹೇಳು,
ನಾಳೆಗೊಂದು ಹೊಸ ಬೆಳಕು

ಎಸ್. ದುರಗಪ್ಪ. ಕುಷ್ಟಗಿ.

# ಬಿಚ್ಚಾಲಿ ಗ್ರಾಮದಲ್ಲಿ RCB ತಂಡಕ್ಕೆ ಭರ್ಜರಿ ಗೆಲುವು

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ಬಿಚ್ಚಾಲಿ ಗ್ರಾಮದಲ್ಲಿ ನಡೆದ ಭೀಮ್ ಸೇನಾ ನಾಯಕ್ ವಾಟರ್ ಮ್ಯಾನ್ ಸ್ಮರಣಾರ್ಥ ಕ್ರಿಕೆಟ್ ಪ್ರೀಮಿಯರ್ ಲೀಗ್ ಪಂದ್ಯಾವಳಿಯಲ್ಲಿ ಬಿಚ್ಚಾಲಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಆರು ತಂಡಗಳು ಭಾಗವಹಿಸಿದ್ದವು. ದಿನಾಂಕ 27-04-2026 ರಂದು ಆರಂಭಗೊಂಡ ಪಂದ್ಯಾವಳಿ 10-05-2026 ರಂದು ಯಶಸ್ವಿಯಾಗಿ ಮುಕ್ತಾಯಗೊಂಡಿತು.**



ರೋಚಕವಾಗಿ ನಡೆದ ಫೈನಲ್ ಪಂದ್ಯದಲ್ಲಿ ಬಿಚ್ಚಾಲಿ ಗ್ರಾಮದ RCB ಕ್ರಿಕೆಟ್ ತಂಡ ಪ್ರಥಮ ಸ್ಥಾನ ಪಡೆದು ಚಾಂಪಿಯನ್ ಆಗಿ ಹೊರಹೊಮ್ಮಿತು. ಉತ್ತಮ ಪ್ರದರ್ಶನ ನೀಡಿದ Mumbai Indians ಕ್ರಿಕೆಟ್ ತಂಡ ದ್ವಿತೀಯ ಸ್ಥಾನ ಪಡೆದುಕೊಂಡಿತು. ವಿಜೇತ ಖಅಃ ತಂಡಕ್ಕೆ ಮಾಜಿ ಗ್ರಾಮ ಪಂಚಾಯತ್ ಅಧ್ಯಕ್ಷರಾದ B.K ವೆಂಕಟೇಶ್ ಅವರು 10,001 ನಗದು ಬಹುಮಾನವನ್ನು ದೇಣಿಗೆಯಾಗಿ ನೀಡಿದರು. ದ್ವಿತೀಯ ಸ್ಥಾನ ಪಡೆದ Mumbai Indian ತಂಡಕ್ಕೆ ಗ್ರಾಮದ ಮುಖಂಡರು ಹಾಗೂ ಸೊಸೈಟಿ ಅಇಔರಾದ ಭಾಸ್ಕರ್ ಬಿಚ್ಚಾಲಿ ಅವರು 5,001 ನಗದು ಬಹುಮಾನವನ್ನು ದೇಣಿಗೆಯಾಗಿ ನೀಡಿದರು.

ಪ್ರಥಮ ಸ್ಥಾನ ಪಡೆದ RCB ತಂಡಕ್ಕೆ ಟ್ರೋಫಿ ಹಾಗೂ ಬಹುಮಾನವನ್ನು ರಾಜರತ್ನ ಗಟ್ಟು ಬಿಚ್ಚಾಲಿ ವಿತರಿಸಿದರು. ದ್ವಿತೀಯ ಸ್ಥಾನ ಪಡೆದ Mumbai Indians ತಂಡಕ್ಕೆ ಟ್ರೋಫಿ ಮತ್ತು ಬಹುಮಾನವನ್ನು ವೀರೇಶ್ ನಾಯಕ್ ಬಿಚ್ಚಾಲಿ ವಿತರಿಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಗ್ರಾಮ ಪಂಚಾಯತ್ ಸದಸ್ಯರಾದ ಖಾಜಾ ಹುಸೇನ್ ಬಿಚ್ಚಾಲಿ, "ಸೋಲು-ಗೆಲುವು ಮುಖ್ಯವಲ್ಲ. ಒಬ್ಬರೊಬ್ಬರು ಪ್ರೀತಿ, ವಿಶ್ವಾಸ ಮತ್ತು ಸ್ನೇಹಭಾವದಿಂದ ಆಟ ಆಡುವುದು ಮುಖ್ಯ. ಇಂತಹ



ಕ್ರೀಡಾಕೂಟಗಳು ಯುವಕರಲ್ಲಿ ಉತ್ಸಾಹ ಮತ್ತು ಒಗ್ಗಟ್ಟು ಬೆಳೆಸುತ್ತವೆ" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಗ್ರಾಮದ ಪ್ರಮುಖರಾದ B.K ವೆಂಕಟೇಶ್ (ವಾಲ್ಮೀಕಿ ನಗರ, ವಾರ್ಡ್ ನಂ.2), ನಾಗೇಶ್ ಸ್ವಾಮಿ (ಹನುಮಾನ ನಗರ, ವಾರ್ಡ್ ನಂ.1), ರಾಜರತ್ನ ಗಟ್ಟು ಬಿಚ್ಚಾಲಿ, ಕುಮಾರ (ಚೆನ್ನವೀರ ನಗರ, ವಾರ್ಡ್ ನಂ.3), ವೀರೇಶ್ ನಾಯಕ್, ಖಾಜಾ ಹುಸೇನ್, ಸಾಬಣ್ಣ ಗಟ್ಟು ಬಿಚ್ಚಾಲಿ, ಹನುಮಂತ ನಾಯಕ್, ಎ. ಪ್ರಕಾಶ್, ಬಸುವ ನಾಯಕ್, ಃಏ ಸೀನು, ಹುಸೇನ್ ಪೀರ್, ಭಾಸ್ಕರ್, ಮಂಜು, ರಾಘು, ನವೀನ್, ಓ. ಭೀಮೇಶ್ ನಾಯಕ್, ವಲಿ, ಜಲೀಲ್ ಸೇರಿದಂತೆ ಊರಿನ ಹಿರಿಯರು ಹಾಗೂ ಮುಖಂಡರು ಉಪಸ್ಥಿತರಿದ್ದರು.

## ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದಿಂದ ಶೈಕ್ಷಣಿಕ ಸಾಲ ಯೋಜನೆಯಡಿ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ವತಿಯಿಂದ 2026-27ನೇ ಸಾಲಿನಲ್ಲಿ ಮುಸ್ಲಿಂ, ಜೈನ್, ಸಿಖ್, ಪಾರ್ಸಿ ಅಲ್ಪಸಂಖ್ಯಾತ ಸಮುದಾಯದ ವಿದ್ಯಾರ್ಥಿಗಳಿಂದ ಅರಿವು ಸಿಇಟಿ/ ನೀಟ್ ಶೈಕ್ಷಣಿಕ ಸಾಲ ಯೋಜನೆಯಡಿ ಅರ್ಹ ಅಭ್ಯರ್ಥಿಗಳಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.**

ಅರಿವು ವಿದ್ಯಾಭ್ಯಾಸ ಸಾಲ ಯೋಜನೆಯಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರದಿಂದ ಸಿಇಟಿ/ ನೀಟ್ ಮುಂತಾತರ ಎಂ.ಬಿ.ಬಿ. ಎಸ್/ಬಿ.ಡಿ.ಎಸ್./ ಆಯುಷ್/ ಬ್ಯಾಚುಲರ್ ಆಫ್ ಆರ್ಕಿಟೆಕ್ಚರ್/ ಬ್ಯಾಚುಲರ್ ಆಫ್ ಇಂಜಿನಿಯ-ರಿಂಗ್/ ಬ್ಯಾಚುಲರ್ ಆಫ್ ಟೆಕ್ನಾಲಜಿ/ ಫಾರ್ಮಸಿ, ಕೃಷಿ ವಿಜ್ಞಾನ ಮತ್ತು ಪಶು ವೈದ್ಯಕೀಯ ಇಂತಹ ಕೋರ್ಸ್‌ಗಳಿಗೆ ಆಯ್ಕೆಯಾದ ವಿದ್ಯಾರ್ಥಿಗಳಿಗೆ ಸಾಲವನ್ನು ನೀಡಲಾಗುವುದು, ಆಸಕ್ತ ವಿದ್ಯಾರ್ಥಿಗಳು ದಿನಾಂಕ: 30-05-2026ರೊಳಗಾಗಿ ಆನ್‌ಲೈನ್ ನಿಗಮದ ವೆಬ್‌ಸೈಟ್ ವಿಳಾಸ: http://kmdconline.karnataka. ರಿತಿ.ಇಟಿ ಗೆ ಲಿಂಕ್‌ಗೆ ಕ್ಲಿಕ್ ಮಾಡಬೇಕು. ನಂತರ ಅರ್ಜಿಯನ್ನು ತುಂಬಿ ನೇರವಾಗಿ ನಿಗಮದ ಜಿಲ್ಲಾ ಕಚೇರಿಗೆ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ವ್ಯವಸ್ಥಾಪಕರು, ನಂ.12-11-49,1 ನೇ ಮಹಡಿ ಅಮೀರ ಟ್ರೇಡಿಂಗ್ ಕಾಂಪ್ಲೆಕ್ಸ್, ಅರಬ್ ಮೋಹಲ್ಲಾ ರಾಯಚೂರು ದೂರವಾಣಿ ಸಂಖ್ಯೆ: 08532 250825ಗೆ ಸಂಪರ್ಕ ಮಾಡಬಹುದಾಗಿದೆ ಎಂದು ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಸರ್ಕಾರಿ ಜಾಗದಲ್ಲಿ ಶೇಡ್ ಹಾಗೂ ಮನೆ ನಿರ್ಮಾಣ ತೆರವಿಗೆ ಕರವೇ ಮನವಿ



ನೈಜ್ಯ ದೆಸೆ ನ್ಯೂಸ್

**ರಾಯಚೂರು: ಜಿಲ್ಲೆಯ ದೇವದುರ್ಗ ತಾಲೂಕಿನ ಜಾಲಹಳ್ಳಿ ಗ್ರಾಮ ಪಂಚಾಯತ್ ಕಾರ್ಯಾಲಯದಲ್ಲಿ ಕರ್ನಾಟಕ ರಕ್ಷಣಾ ವೇದಿಕೆ (ಕರವೇ) ತಾಲೂಕು ಘಟಕ ಹಾಗೂ ಜಾಲಹಳ್ಳಿ ಹೋಬಳಿ ಘಟಕದ ವತಿಯಿಂದ ಗ್ರಾಮ ಪಂಚಾಯಿತಿ ಕಾರ್ಯದರ್ಶಿಗಳಿಗೆ ಮನವಿ ಪತ್ರ ಸಲ್ಲಿಸಲಾಯಿತು.**

ಜಾಲಹಳ್ಳಿಯ ವಾರ್ಡ್ ನಂ. 07ರಲ್ಲಿ ಮಹಿಳೆಯರು ಸಾರ್ವಜನಿಕ ಶೌಚಾಲಯಕ್ಕೆ ಹೋಗುವ ಮುಖ್ಯ ರಸ್ತೆಗೆ ಅಡ್ಡವಾಗಿ ಅನಧಿಕೃತವಾಗಿ ಶೇಡ್ ಹಾಗೂ ಮನೆ ನಿರ್ಮಾಣ ಮಾಡಲಾಗಿದೆ ಎಂದು ಕರವೇ ಮುಖಂಡರು ಆರೋಪಿಸಿದರು. ರಂಗಯ್ಯ ತಂದೆ ಶಿವಪ್ಪ ವಂದಲಿ ಹಾಗೂ ಶಿವನ ತಂದೆ ಶಿವಪ್ಪ ಅವರು ಅಕ್ರಮವಾಗಿ ಶೇಡ್ ನಿರ್ಮಾಣ ಮಾಡಿರುವುದರಿಂದ ಮಹಿಳೆಯರು ಶೌಚಾಲಯಕ್ಕೆ ತೆರಳಲು ತೊಂದರೆ ಉಂಟಾಗಿದೆ ಎಂದು ಮನವಿಯಲ್ಲಿ ಉಲ್ಲೇಖಿಸಲಾಗಿದೆ.

ಇದೇ ಶೇಡ್‌ನ ಕೆಳಭಾಗದಲ್ಲಿ ಸಾರ್ವಜನಿಕರಿಗೆ ನೀರು ಸರಬರಾಜು ಮಾಡುವ ಮುಖ್ಯ ಪೈಪ್‌ಗಳು ಹಾದು ಹೋಗುತ್ತಿದ್ದು, ಇದರಿಂದ ಸಾರ್ವಜನಿಕರಿಗೂ ಸಮಸ್ಯೆ ಉಂಟಾಗುತ್ತಿದೆ ಎಂದು ತಿಳಿಸಿದರು. ಮಹಿಳೆಯರ ಸಂಚಾರಕ್ಕೆ ಅಡಚಣೆ ಆಗಿರುವುದ-ರಿಂದ ಸಂಬಂಧಪಟ್ಟ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ, ಕಟ್ಟಡ ಪರವಾನಗಿಯನ್ನು ರದ್ದುಪಡಿಸಿ, ಅಕ್ರಮ ಶೇಡ್ ತೆರವುಗೊಳಿಸಬೇಕು ಎಂದು ಆಗ್ರಹಿಸಿದರು. ಒಂದು ವೇಳೆ ಸಂಬಂಧಪಟ್ಟ ಅಧಿಕಾ-ರಿಗಳು ಕ್ರಮ ಕೈಗೊಳ್ಳದಿದ್ದಲ್ಲಿ ಗ್ರಾಮ ಪಂಚಾಯತ್ ಕಾರ್ಯಾಲಯದ ಮುಂದೆ ಪ್ರತಿಭಟನೆ ನಡೆಸಲಾಗುವುದು ಎಂದು ಕರವೇ ಮುಖಂಡರು ಎಚ್ಚರಿಕೆ ನೀಡಿದರು.

ಈ ಸಂದರ್ಭದಲ್ಲಿ ನಂದಪ್ಪ ಪಿ. ಮಡ್ಡಿ (ಕರವೇ ತಾಲೂಕು ಅಧ್ಯಕ್ಷರು), ರಂಗಣ್ಣ ಕೋಲ್ಕಾರ್, ಗುರುನಾಥ್ ರೆಡ್ಡಿ (ತಾಲೂಕು ಪ್ರಧಾನ ಕಾರ್ಯದರ್ಶಿ), ಮೌನೇಶ್ ದೇಸಾಯಿ, ರಾಮಣ್ಣ ತೆಗ್ಗಳ್ಳಿ (ಗ್ರಾಮ ಪಂಚಾಯತ್ ಸದಸ್ಯರು), ಚನ್ನಬಸವ (ಗ್ರಾಮ ಪಂಚಾಯತ್ ಸದಸ್ಯರು), ಬಸಮ್ಮ (ಗ್ರಾಮ ಪಂಚಾಯತ್ ಸದಸ್ಯರು), ರಮೇಶ್, ರಂಗಪ್ಪ ಬಂಡಿ, ಭೀಮಣ್ಣ ನಾಯಕ್ (ತಾಲೂಕು ಸಂಚಾಲಕರು), ಅಮರೇಶ್ (ಹೋಬಳಿ ಉಪಾಧ್ಯಕ್ಷರು), ತಮ್ಮಣ್ಣ, ವೆಂಕಟೇಶ್ (ಜಾಲಹಳ್ಳಿ ಗ್ರಾಮ ಘಟಕ ಉಪಾಧ್ಯಕ್ಷರು) ಸೇರಿದಂತೆ ಹಲವರು ಉಪಸ್ಥಿತರಿದ್ದರು.

# ಹಾಲಾಪೂರ-ಸಾನಬಾಳ ಸೇತುವೆ ಕಾಮಗಾರಿ ನೆನಗುದಿಗೆ,ರೈತರು ತೀವ್ರ ಆಕ್ರೋಶ, ಅಧಿಕಾರಿಗಳಿಗೆ ದಿಕ್ಕಾರ

ನೈಜ್ಯ ದೆಸೆ ನ್ಯೂಸ್

**ಮಸ್ಕಿ: ದೇವರುವರ ಕೊಟ್ಟರು, ಪೂಜಾರಿ ವರ ಕೊಡಲಿಲ್ಲ ಎನ್ನುವಂತೆ ಆಗಿದೆ ಮಸ್ಕಿ ತಾಲ್ಲೂಕಿನ ಹಾಲಾಪೂರ ಸಮೀಪದ 65 ರ ಮುಖ್ಯ ಕಾಲುವೆ ಮೇಲೆ ಆಯ್ದು ಹೋಗುವ ಸಾನಬಾಳ ಸೇತುವೆ ಕಾಮಗಾರಿ ಕೆಲಸ ನೆನಗುದಿಗೆ ಬಿದ್ದು ಮೂರು ವರ್ಷವಾಯಿತು.**

ಇದರ ಬಗ್ಗೆ ಅಧಿಕಾ-ರಿಗಳು ಬೇಜವಬ್ದಾರಿ,ಗುತ್ತಿಗೆರದಾರರ ದಿವ್ಯ ನಿರ್ಲಕ್ಷ್ಯತನವೇ ಕಾಮಗಾರಿ ವಿಲಂಬ, ಹಾಲಾಪೂರ ಗ್ರಾಮಸ್ಥರ ಬಹುತೇಕ ಹೊಲಗಳು ಇದೆ ಭಾಗದಲ್ಲಿ ಇವೆ, ಎಷ್ಟೊ




ಸಲ ಮಳೆಗಾಲದಲ್ಲಿ ಅತಿ ಹೆಚ್ಚು ಮಳೆ ಬಂದ ಕಾರಣ ಬೆಳದ ಬೆಳೆಗಳನ್ನು ತರಲಾರದೆ ಅಲ್ಲಿ ಬಿಟ್ಟರುವ ಉದಾಹರಣೆ ಇವೆ ಎಂದು ರೈತರು ನೋವಿನಿಂದ ಹೇಳುತ್ತಾರೆ, ಅದಕ್ಕೆ ಶಾಸಕರು ನೆನಗುದಿಗೆ ಬಿದ್ದ ಸೇತುವೆ ಕೆಲಸವನ್ನು ಸಂಬಂಧಿಸಿದ ಅದಿಕಾರಿ,ಗುತ್ತಿಗೆದಾರರಿಗೆ ಕೆಲಸ ಬೇಗ ಮುಗಿಸಲು ತಿಳಸಬೇಕು ಎಂದು ಅನೇಕ ರೈತರು ಪತ್ರಿಕೆಯೊಂದಿಗೆ ಮಾತನಾಡಿದರು.

ಒಂದು ವಾರದೊಳಗೆ ಕೆಲಸ ಪ್ರಾರಂಭ ಮಾಡಬೇಕು, ಇಲ್ಲವಾದರೆ ಉಗ್ರಹೋರಾಟ ಮಾಡಲಾಗುವುದು ಎಂದು ಬಸಯ್ಯಸ್ವಾಮಿ ಎಸ್, ಚನ್ನಬಸಯ್ಯ ದಿನ್ನಿ ಗ್ಯಾರಂಟಿ ಸಮಿತಿ ಸದಸ್ಯರು,ವಿರನಗೌಡ ಮಾ.ಪಾ, ಯಂಕನಗೌಡ ಎಸ್, ಶ್ರೀಕಾಂತ ಕಟ್ಟಿಮನಿ,ಮೌನೇಶ ಮರಾಠ,ವಿರೇಶ ನಾಯಕ,ಯಲ್ಲಪ್ಪ ದೇಸಾಯಿ,ಮೌನೇಶ ವಿಶ್ವಕರ್ಮ, ಶರಣಪ್ಪ ತುಂಟಾಪೂರ, ಹನುಮಂತ ನವಲಿ, ಮುದಕಪ್ಪ ಕಡೆಮನಿ,ಇಮಾಮಸಾಬು, ಮಾಳಿಂಗರಾಯ ಬೌತರ,ರಡ್ಡೆಪ್ಪ ಜಿನ್ನಾಪೂರ,ಬಸಣ್ಣ ಹಾಗೂ ಇನ್ನಿತರರು ಇದ್ದರು.

## ಸಿರಿಗೇರಿ ಗ್ರಾಮೀಣ ಮಕ್ಕಳ ಇಸ್ಲಾಮಿಕ್ ಬೇಸಿಗೆ ಶಿಬಿರ ಸಮಾರೋಪ ಸಮಾರಂಭ

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ತಾಲೂಕು ಸಿರಿಗೇರಿ ಗ್ರಾಮದ ಸುನ್ನೀ ಜಾಮಿಯಾ ಮಸ್ಜಿದ್ ಕಮೀಟಿ ಮಜೀದ್ ಆವರಣದಲ್ಲಿ ಗ್ರಾಮೀಣ ಮಕ್ಕಳ ಇಸ್ಲಾಮಿಕ್ ಬೇಸಿಗೆ ಶಿಬಿರ 2026 ಶಮಾ ಪರಿವೀನ್ ಮೂಅಲ್ಲಿಮ್ ಎಸ್ ಚಾಂದ್ ಬಾಷಾ ಇವರು ಶಿಬಿರ ಸಂಯೋಜಕರಾಗಿ ಸಂಪನ್ಮೂಲ ವ್ಯಕ್ತಿಗಳಾಗಿ ಸೇವೆ ಸಲ್ಲಿಸುವುದಕ್ಕಾಗಿ ಸುನ್ನೀ ಜಾಮಿಯಾ ಮಜೀದ್ ಕಮಿಟಿಯಿಂದ ಹೃತ್ಪೂರ್ವಕ ಸವಿ ನೆನಪಿನ ಸ್ಮರಣಿಕೆ ಅಭಿನಂದನೆ ಸಲ್ಲಿಸಲಾಯಿತು.**



ಮೌಲಾನ ಆಸಿಫ್ ರಿಫಾಯಿ ಬೆನ್ನೂರ್ ಇಸ್ಮಾಯಿಲ್ ಸಾಬ್ ಇವರಿಗೂ ಬಳ್ಳಾರಿ ಜಿಲ್ಲಾ ವಕ್ಫ್ ಸಲಹಾ ಸಮಿತಿ ಮಾಜಿ ಉಪಾಧ್ಯಕ್ಷರು ಸೌಕಾರ್ ಜಮೀನ್ದಾರ್ ಸೈಯದ್ ಷಾ ಮೋಹಿಯುದ್ದೀನ್ ಖಾದ್ರಿ ಅವರು ಗೌರವಿಸಿ ಶುಭ ಹಾರೈಸಿದರು ಮಸೀದಿಯ ಅಧ್ಯಕ್ಷರು ಎಸ್. ಖಾದರ್ ಬಾಷಾ, ಮೊಹಮ್ಮದ್ ರಫಿ, ಮುರ್ಷಿದ್ ಸಾಹೇಬ್, ಅಲ್ಲಾಜ್ ಕೊಲ್ಮಿ ನಬಿ ಸಾಬ್, ಚಾಂದ್ ಬಾಷಾ, ಟೀಚರ್ ಶಕ್ಷಾವಲಿ, ರಫೀಕ್, ಸಮುದಾಯದ ಮುಖಂಡರ ಸಮ್ಮುಖದಲ್ಲಿ ಬೇಸಿಗೆ ಶಿಬಿರದಲ್ಲಿ ಭಾಗವಹಿಸಿದ ಮಕ್ಕಳಿಗೆ ಪ್ರಮಾಣ ಪತ್ರ ನೆನಪಿನ ಕಾಣಿಕೆ ಸಮಾರೋಪ ಸಮಾರಂಭದಲ್ಲಿ ವಿತರಿಸಿದರು ವರದಿ :ಮಸೀದಿ,ಅಬ್ದುಲ್ ಗೌಸ್, ಸಿರುಗುಪ್ಪ

# ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ-04 ಯೋಜನೆಯಡಿ ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಮುಖ್ಯಮಂತ್ರಿಗಳ ಅಮೃತ ನಗರೋತ್ಥಾನ ಯೋಜನೆ ಹಂತ 4ರಡಿ ರಾಯಚೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಕುಟುಂಬಗಳಿಗೆ ಉಚಿತ ಯುಜಿಡಿ ಮನೆ ಸಂಪರ್ಕ ಕಲ್ಪಿಸಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಅಹ್ವಾನಿಸಲಾಗಿದೆ.**

ಆಸಕ್ತರು ಜಾತಿ ಪ್ರಮಾಣ ಪತ್ರ, ಆಸ್ತಿ ಮಾಲೀಕತ್ವ ದಾಖಲಾತಿ / ಖಾತೆ / ಪಹಣಿ / ನೋಂದಣಿ ದಾಖಲೆ,



ಆಧಾರ್ ಕಾರ್ಡ್ ಪ್ರತಿ, ಸಲ್ಲಿಸಲಾದ ದಾಖಲೆಗಳು ನಿಜವಾಗಿದ್ದು, ತಪ್ಪು ಮಾಹಿತಿ ನೀಡಿಲ್ಲ ಎಂಬುದಾಗಿ ನೋಟರಿ ಅಫಿಡೆವಿಟ್‌ದೊಂದಿಗೆ ದಿನಾಂಕ: 15-06-2026ರೊಳಗಾಗಿ ಪಾಲಿಕೆಗೆ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಭೀಮಾಶಂಕರ ಮೊ.ಸಂ:8076165543 ಅಥವಾ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರ ಜೈಪಾಲರೆಡ್ಡಿ ಮೊ.ಸಂ: 7989813605ಗೆ ಸಂಪರ್ಕ ಮಾಡಬಹುದಾಗಿದೆ ಎಂದು ರಾಯಚೂರು ಮಹಾನಗರ ಪಾಲಿಕೆಯ ಕಾರ್ಯಪಾಲಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಅಂತರಾಷ್ಟ್ರೀಯ ಶುಶ್ರೂಷಕರ ದಿನ :ತಂತ್ರಜ್ಞಾನದ ಯುಗದಲ್ಲೂ ಅಳಿಸಲಾಗದ' ಮಾನವೀಯ ಸ್ಪರ್ಶ '

ನೈಜ್ಯ ದೆಸೆ ನ್ಯೂಸ್

**ಪ್ರತಿ ವರ್ಷ ಮೇ 12 ರಂದು ಜಗತ್ತಿನಾದ್ಯಂತ *'ಅಂತರಾಷ್ಟ್ರೀಯ ಶುಶ್ರೂಷಕರ ದಿನ'*ವನ್ನು ಆಚರಿಸಲಾಗುತ್ತದೆ. ಆಧುನಿಕ ನರ್ಸಿಂಗ್ ಕ್ಷೇತ್ರದ ದೈವತ ಫ್ಲಾರೆನ್ಸ್ ನೈಟಿಂಗೇಲ್ ಅವರ ಜನ್ಮದಿನದ ಸ್ಮರಣಾರ್ಥ ಈ ದಿನವನ್ನು ಆಚರಿಸುವ ಮೂಲಕ, ಮನುಕುಲದ ಆರೋಗ್ಯ ಕಾಪಾಡುವಲ್ಲಿ ನರ್ಸ್‌ಗಳ ಅಪ್ರತಿಮ ಕೊಡುಗೆಯನ್ನು ಸ್ಮರಿಸಲಾಗುತ್ತದೆ. ೦ಖ ಯುಗ ಮತ್ತು ನರ್ಸಿಂಗ್‌ನ ಅನಿವಾರ್ಯತೆ ಇಂದು ನಾವು ಕೃತಕ ಬುದ್ಧಿಮತ್ತೆ (AI) ಜಗತ್ತನ್ನು ಆಳುತ್ತಿರುವ ಕಾಲದಲ್ಲಿದ್ದೇವೆ.**

ಬರುವ ದಿನಗಳಲ್ಲಿ ೦ಖ ತಂತ್ರಜ್ಞಾನವು ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿ ಮಾಡಬಹುದು. ರೋಗವನ್ನು ಪತ್ತೆಹಚ್ಚುವಲ್ಲಿ ಅಥವಾ ಸಂಕೀರ್ಣ ಶಸ್ತ್ರಚಿಕಿತ್ಸೆಗಳಲ್ಲಿ ೦ಖ ವೈದ್ಯರಿಗೆ ಸರಿಸಮಾನವಾಗಿ ನಿಲ್ಲಬಹುದು, ಅಥವಾ ಕೆಲವು ಹಂತಗಳಲ್ಲಿ ವೈದ್ಯರ ಸ್ಥಾನವನ್ನೇ ತುಂಬಬಹುದು. ಭವಿಷ್ಯದಲ್ಲಿ ಅನೇಕ ವೃತ್ತಿಗಳಿಗೆ ೦ಖ ನಿಂದ ಕಂಟಕ ಬರಬಹುದು ಎಂಬ ಆತಂಕವೂ ಇದೆ. ಆದರೆ, ನರ್ಸಿಂಗ್ ವೃತ್ತಿಯನ್ನು ಮಾತ್ರ ಯಾವುದೇ ತಂತ್ರಜ್ಞಾನ ಅಥವಾ ರೋಬೋಟ್ ಬದಲಿಸಲು ಸಾಧ್ಯವಿಲ್ಲ. ಏಕೆಂದರೆ ನರ್ಸಿಂಗ್ ಎಂಬುದು ಕೇವಲ ದತ್ತಾಂಶ (Data) ಅಥವಾ ತಾಂತ್ರಿಕ ಕೌಶಲ್ಯವಲ್ಲ; ಅದೊಂದು 'ಭಾವನಾತ್ಮಕ ಸೇವೆ'. ಯಂತ್ರಕ್ಕೆ ನೀಡಲಾಗದ ಮಮತೆ: ಒಂದು ಯಂತ್ರವು ರೋಗಿಗೆ ನಿಖರವಾದ ಸಮಯದಲ್ಲಿ ಇಂಜೆಕ್ಷನ್ ನೀಡಬಹುದು,

ಆದರೆ ಒಬ್ಬ ರೋಗಿ ನೋವಿನಿಂದ ನರಳುತ್ತಿರುವಾಗ ಅವರ ಕೈ ಹಿಡಿದು 'ನಾವಿದ್ದೇವೆ, ಭಯಪಡಬೇಡಿ' ಎಂದು ಧೈರ್ಯ ತುಂಬುವ ಆ ಮಾನವೀಯ ಗುಣ (Human Touch) ಕೇವಲ ಒಬ್ಬ ನರ್ಸ್‌ಗೆ ಮಾತ್ರ ಸಾಧ್ಯ. Empathy (ಸಹಾನುಭೂತಿ): AI ಗೆ ಮಾಹಿತಿ ಇರುತ್ತದೆ, ಆದರೆ ಭಾವನೆಗಳಿರುವುದಿಲ್ಲ. ರೋಗಿಯ ಕಣ್ಣೀರನ್ನು ಓದುವ, ಅವರ ಮೌನವನ್ನು ಅರ್ಥ-'ಮಾಡಿಕೊಳ್ಳುವ ಸಹಾನುಭೂತಿ ನರ್ಸಿಂಗ್‌ನ ಮೂಲ ಗುಣ. ಇದನ್ನು ಯಾವುದೇ ಅಲ್ಗಾ-ರಿದಮ್‌ಗಳಿಂದ ಸೃಷ್ಟಿಸಲು ಸಾಧ್ಯವಿಲ್ಲ. ಸೇವೆ, ಶಿಸ್ತು ಮತ್ತು ಸಮರ್ಪಣೆ ವೈದ್ಯಕೀಯ ಲೋಕ ಎಷ್ಟು ಆಧುನಿಕಗೊಂಡರೂ, ನರ್ಸಿಂಗ್‌ನ ಮೂಲಭೂತ ಗುಣಗಳಾದ ಶಿಸ್ತು




(Discipline) ಮತ್ತು ಸಮರ್ಪಣಾ ಭಾವ (Dedication) ಎಂದಿಗೂ ಬದಲಾಗದ ಸತ್ಯಗಳು. ಇಂದಿನ ತಲೆಮಾರಿನ ನರ್ಸಿಂಗ್ ವಿದ್ಯಾರ್ಥಿಗಳು ನೆನಪಿಡಬೇಕಾದ ಅಂಶವೆಂದರೆ, ನೀವು ಕೇವಲ ಯಂತ್ರಗಳ ಸಹಾಯಕರಲ್ಲ, ನೀವು ರೋಗಿಯ ಪಾಲಿನ ಜೀವದಾತರು.

ಕೋವಿಡ್-19 ಕಾಲದಲ್ಲಿ ನಾವು ಕಂಡಂತೆ, ಸಾವು ಬಾಗಿಲು ಬಡಿಯುತ್ತಿದ್ದಾಗಲೂ ಪಿಪಿಇ ಕಿಟ್ ಧರಿಸಿ, ಹಸಿವು-ನೀರನ್ನು ಮರೆತು ಹೋರಾಡಿದ ನರ್ಸ್‌ಗಳ ತ್ಯಾಗಕ್ಕೆ ಯಾವುದೇ ತಂತ್ರಜ್ಞಾನ ಸಾಟಿಯಿಲ್ಲ. ಅಂತಹ ಅಚಲವಾದ ನಿಷ್ಠೆ ಮತ್ತು ಸಮರ್ಪಣೆ ಇಂದಿನ ಹೊಸ ತಲೆಮಾರಿನಲ್ಲೂ ಮುಂದುವರಿಯಬೇಕಿದೆ. ನಕ್ಷತ್ರ ಮೀನಿನ ಕಥೆ ನೀಡುವ ಪಾಠ ಸಮುದ್ರದ ದಡದಲ್ಲಿ ಬಿದ್ದ ಸಾವಿರಾರು ನಕ್ಷತ್ರ ಮೀನುಗಳಲ್ಲಿ ಒಂದನ್ನು ಎತ್ತಿ ಮರಳಿ ನೀರಿಗೆ ಹಾಕುವ ವ್ಯಕ್ತಿಯ ಕಾರ್ಯ ಜಗತ್ತನ್ನೇನೂ ಬದಲಿಸದಿರಬಹುದು, ಆದರೆ ಆ ಒಂದು ಮೀನಿನ ಪಾಲಿಗೆ ಹೊಸ ಜೀವನ ಸಿಕ್ಕಿರುತ್ತದೆ. ಹಾಗೆಯೇ, ಆಸ್ಪತ್ರೆಯಲ್ಲಿ ಸಾವಿರಾರು ರೋಗಿಗಳಿದ್ದರೂ, ಒಬ್ಬ ನರ್ಸ್ ತೋರಿಸುವ ಒಂದು ಸಣ್ಣ ಕಾಳಜಿ ಆ ರೋಗಿಯ ಬದುಕನ್ನೇ ಬದಲಿಸಬಲ್ಲದು. ತಂತ್ರಜ್ಞಾನ ಎಷ್ಟೇ ಬೆಳೆದರೂ, ಮನುಷ್ಯನಿಗೆ ಮನುಷ್ಯನ ಸಾಂತ್ವನ ಬೇಕೇ ಬೇಕು. ೦ಖ ಎಷ್ಟೇ ಬುದ್ಧಿವಂತವಾದರೂ ಅದು ಹೃದಯಹೀನ.

ಆದರೆ ನರ್ಸಿಂಗ್ ಎಂಬುದು ಹೃದಯದಿಂದ ಮಾಡುವ ಕೆಲಸ. ಹೀಗಾಗಿಯೇ ಮುಂಬರುವ ದಿನಗಳಲ್ಲಿ ಅನೇಕ ವೃತ್ತಿಗಳು ಇತಿಹಾಸ ಪುಟ ಸೇರಿದರೂ, ನರ್ಸಿಂಗ್ ಮಾತ್ರ ಅತ್ಯಂತ ಗೌರವಾನ್ವಿತ ಮತ್ತು ಅನಿವಾರ್ಯ ವೃತ್ತಿಯಾಗಿ ಉಳಿಯಲಿದೆ. ಸಮಾಜದ ಈ ಶ್ವೇತ ವಸ್ತ್ರಧಾರಿ ಸೈನಿಕರಿಗೆ, ಮನುಕುಲದ ಕಣ್ಣೀರು ಒರೆಸುವ ಕರುಣಾಮಯಿಗಳಿಗೆ ಅಂತರಾಷ್ಟ್ರೀಯ ಶುಶ್ರೂಷಕರ ದಿನದ ಹೃತ್ಪೂರ್ವಕ ಶುಭಾಶಯಗಳು. "ವೈದ್ಯರು ರೋಗವನ್ನು ಗುಣಪಡಿಸಿದರೆ, ನರ್ಸ್‌ಗಳು ರೋಗಿಯನ್ನು ಗುಣಪಡಿಸುತ್ತಾರೆ." ಯಾವಾಗ ಒಬ್ಬ ಶುಶ್ರೂಷಕಿ ಜ್ಞಾನದಿಂದ ಸಬಲೀಕೃತಳಾಗುತ್ತಾಳೋ ಮತ್ತು ಸೇವೆಯಿಂದ ಸಶಕ್ತಳಾಗುತ್ತಾಳೋ, ಆಗಲೇ ಸಮಾಜದ ಆರೋಗ್ಯದ ಭವಿಷ್ಯ ಸುಭದ್ರವಾಗಿರುತ್ತದೆ. ಅವರು ಕೇವಲ ಆಸ್ಪತ್ರೆಯ ಸಿಬ್ಬಂದಿಯಲ್ಲ, ಅವರು ಮನುಕುಲದ ಭರವಸೆಯ ಜೀವರಕ್ಷಕರು." **ಡಾಕ್ಟರ್. ಶಿವರಾಜ್ ಪಾಟೀಲ ಸಹನಾ ಮಕ್ಕಳ ಆಸ್ಪತ್ರೆ. ಸಿಂಧನೂರು.**

## ನೇಮಕಾತಿ ಪ್ರಕಟಣೆ

DHFWS ಯಾದಗಿರಿ ನೇಮಕಾತಿ 2026 32 ವೈದ್ಯಕೀಯ ಅಧಿಕಾರಿಗಳು, ಲ್ಯಾಬ್ ತಂತ್ರಜ್ಞ ಹುದ್ದೆಗಳಿಗೆ ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿ ಮೇ 7, 2026 DHFWS ಯಾದಗಿರಿ ನೇಮಕಾತಿ 2026: 32 ವೈದ್ಯಕೀಯ ಅಧಿಕಾರಿಗಳು, ಲ್ಯಾಬ್ ತಂತ್ರಜ್ಞ ಹುದ್ದೆಗಳಿಗೆ ಅರ್ಜಿ ಸಲ್ಲಿಸಿ. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಂಘ ಯಾದಗಿರಿ ಮೇ 2026 ರ ಆಊಈಘಖ ಯಾದಗಿರಿ ಅಧಿಕೃತ ಅಧಿಸೂಚನೆಯ ಮೂಲಕ ವೈದ್ಯಕೀಯ ಅಧಿಕಾರಿಗಳು, ಲ್ಯಾಬ್ ತಂತ್ರಜ್ಞ ಹುದ್ದೆಗಳನ್ನು ಭರ್ತಿ ಮಾಡಲು ಅರ್ಹ ಮತ್ತು ಆಸಕ್ತ ಅಭ್ಯರ್ಥಿಗಳಿಂದ ಅರ್ಜಿಗಳನ್ನು ಆಹ್ವಾನಿಸಿದೆ. ಯಾದಗಿರಿ ಕರ್ನಾಟಕ ಸರ್ಕಾರದಲ್ಲಿ ವೃತ್ತಿಜೀವನವನ್ನು ಹುಡುಕುತ್ತಿರುವ ಉದ್ಯೋಗಾಕಾಂಕ್ಷಿಗಳು ಈ ಅವಕಾಶವನ್ನು ಬಳಸಿಕೊಳ್ಳಬಹುದು. ಆಸಕ್ತ ಅಭ್ಯರ್ಥಿಗಳು 20–ಮೇ–2026 ರಂದು ಅಥವಾ ಮೊದಲು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಬಹುದು. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಪ್ರಾರಂಭ ದಿನಾಂಕ: 05–05–2026 ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ: 20–ಮೇ–2026 ಅಧಿಕೃತ ವೆಬ್‌ಸೈಟ್: yadgir.nic.in

# ಭತ್ತಕ್ಕೆ ಪರ್ಯಾಯವಾಗಿ ಎಳ್ಳು ಬೆಳೆದ ರೈತ"

ನೈಜ್ಯ ದೆಸೆ ನ್ಯೂಸ್

**ಕವಿತಾಳ: ಆಣೆಕಟ್ಟು ಗೇಟ್ ಅಳವಡಿಕೆ ಸಲುವಾಗಿ ಈ ಬಾರಿ ಬೇಸಿಗೆ ಬೆಳೆಗೆ ತುಂಗಭದ್ರಾ ಎಡದಂಡೆ ಕಾಲುವೆ ನೀರು ಕಾಣದೆ ಪ್ರತಿ ವರ್ಷ ಎರಡು ಬೆಳೆ ಭತ್ತವನ್ನೆ ಬೆಳೆಯುತ್ತಿದ್ದ ಟಿಬಿ ಡ್ಯಾಮ್ ರೈತರು ಈ ಬಾರಿ ಬೇಸಿಗೆ ಬೆಳೆಯಾಗಿ ಭತ್ತ ಬೆಳೆಯದೆ ಸಾಕಷ್ಟು ರೈತರು ಹೊಲಗಳನ್ನು ಖಾಲಿ ಬಿಟ್ಟಿದ್ದಾರೆ. ಆದರೆ ಇಲ್ಲೊಬ್ಬ ರೈತರು ತಮ್ಮ ಜಮೀನಿನಲ್ಲಿ ಸಾಂಪ್ರದಾಯಿಕ ಭತ್ತದ ಬೆಳೆಗೆ ಪರ್ಯಾಯವಾಗಿ ಎಳ್ಳು ಬೆಳೆಯುವ ಮೂಲಕ ಮಸ್ಕಿ ತಾಲ್ಲೂಕಿನ ಹಾಲಾಪುರ ಗ್ರಾಮದ ರೈತ ಮರಿಗೌಡ ಪಾಟೀಲ ಆರ್ಥಿಕವಾಗಿ ಲಾಭ ಪಡೆದಿದ್ದಾರೆ.**



ಜಲಾಶಯಕ್ಕೆ ಕ್ರಸ್ಟ್ ಗೇಟ್ ಅಳವಡಿಕೆ ಹಿನ್ನೆಲೆಯಲ್ಲಿ ತುಂಗಭದ್ರಾ ಎಡದಂಡೆ ಕಾಲುವೆಗೆ ನೀರು ಪೂರೈಸದ ಕಾರಣ ಕಾಲುವೆ ನೀರು ಅವಲಂಬಿಸಿ ವ್ಯವಸಾಯ ಮಾಡುತ್ತಿದ್ದ ರೈತರು ಪ್ರಸಕ್ತ ಬೇಸಿಗೆ ಅವಧಿಯಲ್ಲಿ ಯಾವುದೇ ಬೆಳೆ ಬೆಳೆದಿಲ್ಲ. ಬೇಸಿಗೆಯಲ್ಲಿ ನೀರಿನ ಸಮಸ್ಯೆ ಉಂಟಾದ ಕಾರಣ ಭತ್ತಕ್ಕೆ ಪರ್ಯಾಯವಾಗಿ ಬೇರೆ ಬೆಳೆಯುವ ಬಗ್ಗೆ ಯೋಚಿಸಿದ ರೈತ ಮರಿಗೌಡ ಪಾಟೀಲ ಸಮೀಪದ ತುಗ್ಗಲದಿನ್ನಿ ಗ್ರಾಮದ ಬಳಿಯ ತಮ್ಮ 2.5 ಎಕರೆ ಸ್ವಂತ ಜಮೀನಿನಲ್ಲಿ ಕರಿ ಎಳ್ಳು ಬಿತ್ತನೆ ಮಾಡಿ ಉತ್ತಮ ಇಳುವರಿ ಪಡೆದಿದ್ದಾರೆ. ಅತ್ಯಂತ ಕಡಿಮೆ ಪ್ರಮಾಣದ ರಸಗೊಬ್ಬರ, ಕ್ರಿಮಿನಾಶಕ ಬಳಕೆ ಸೇರಿದಂತೆ ಕಡಿಮೆ ನಿರ್ವಹಣೆ ವೆಚ್ಚದಲ್ಲಿ ಮೂರು ತಿಂಗಳ ಅವಧಿಯಲ್ಲಿ ಪ್ರತಿ ಎಕರೆ ಪ್ರದೇಶದಲ್ಲಿ ಅಂದಾಜು 6 ಕ್ವಿಂಟಾಲ್ ಎಳ್ಳು ಬೆಳೆದ ಮರಿಗೌಡ ಅವರ ಬಗ್ಗೆ ಸ್ಥಳೀಯ ರೈತರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

2.5 ಎಕರೆ ಜಮೀನಿನಲ್ಲಿ 15 ಕ್ವಿಂಟಾಲ್ ಕರಿ ಎಳ್ಳು ಇಳುವರಿ ಬಂದಿದೆ, ಪ್ರಸ್ತುತ ಮಾರುಕಟ್ಟೆಯಲ್ಲಿ ?13 ಸಾವಿರದಂತೆ ಮಾರಾಟವಾಗುತ್ತಿದೆ. ಪ್ರತಿ ಎಕರೆ ಬೆಳೆ ಬೆಳೆಯಲು 10 ಸಾವಿರ ಖರ್ಚಾಗಿದೆ ಅಂದಾಜು 2 ಲಕ್ಷ ಮೊತ್ತದ ಬೆಳೆ ಕೈ ಸೇರಿದೆ. 'ಈ ಭಾಗದಲ್ಲಿ ಬಹುತೇಕ ರೈತರು ಸಾಂಪ್ರದಾಯಿಕ ಭತ್ತ ಬೆಳೆಯುತ್ತಿದ್ದು ಪರ್ಯಾಯವಾಗಿ ಬೇರೆ ಬೆಳೆ ಬೆಳೆಯಲು ಆಸಕ್ತಿ ತೋರುವುದಿಲ್ಲ. ಬೇಸಿಗೆಯಲ್ಲಿ ಕಾಲುವೆ ನೀರು ಇಲ್ಲದ ಕಾರಣ ಮಾದರಿಯಾಗಿ ಬೆಳೆದು ನೋಡುವ ಕುತೂಹಲದಿಂದ ಕರಿ ಎಳ್ಳು ಬಿತ್ತನೆ ಮಾಡಿದ್ದೆ ಇದೀಗ ಉತ್ತಮ ಇಳುವರಿ ಬಂದಿದೆ' ಎಂದು ರೈತ ಮರಿಗೌಡ ಪಾಟೀಲ ಸಂತಸ ವ್ಯಕ್ತಪಡಿಸಿದರು. 'ಸತತ ಒಂದೇ ಬೆಳೆ ಬೆಳೆಯುವುದರಿಂದ ಭೂಮಿಯ ಫಲವತ್ತತೆ ನಾಶವಾಗುತ್ತದೆ ಮಣ್ಣಿನ ಗುಣಧರ್ಮ ಆಧರಿಸಿ ಬೇರೆ ಬೆಳೆ ಬೆಳೆಯುವುದು ಒಳ್ಳೆಯ ಬೆಳವಣಿಗೆ ಈ ಭಾಗದಲ್ಲಿ ಬಹುತೇಕ ಬತ್ತದ ಗದ್ದೆಗಳು ಈ ವರ್ಷ ಬಿಕೊ ಎನ್ನುತ್ತಿವೆ ಮರಿಗೌಡ ಅವರು ಎಳ್ಳು ಬೆಳೆದು ಮಾದರಿಯಾಗಿದ್ದಾರೆ' ಎಂದು ರೈತ ಬಸ್ಸಪ್ಪ ತುಗ್ಗಲದಿನ್ನಿ ಮೆಚ್ಚುಗೆ ವ್ಯಕ್ತಪಡಿಸಿದರು.

## ಮಾನ್ವಿಯಲ್ಲಿ ರೈತ ಸಂಘದಿಂದ ಪ್ರತಿಭಟನೆ

### ಹಿಂಗಾರು ಜೋಳ ಖರೀದಿ ಕೇಂದ್ರ ಆರಂಭಕ್ಕೆ ಒತ್ತಾಯ

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಪಟ್ಟಣದ ಬಸವ ವೃತ್ತದಲ್ಲಿ ಕರ್ನಾಟಕ ರಾಜ್ಯ ರೈತ ಸಂಘ ತಾಲೂಕು ಸಮಿತಿ ವತಿಯಿಂದ ಪ್ರತಿಭಟನೆ ನಡೆಸಿ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಿಲ್ಲಾ ಉಪನಿರ್ದೇಶಕರಾದ ನಜೀರ್ ಅಹ್ಮದ್ ಅವರಿಗೆ ಮನವಿ ಪತ್ರ ಸಲ್ಲಿಸಲಾಯಿತು. ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ರೈತ ಸಂಘದ ರಾಜ್ಯ ಕಾರ್ಯದರ್ಶಿ ಸೂಗುರಯ್ಯ ಸ್ವಾಮಿ ಆರ್.ಎಸ್. ಮಠ ಮಾತನಾಡಿ, ತಾಲೂಕಿನ ಮುಂಗಾರು ಹಂಗಾಮಿನಲ್ಲಿ ರೈತರಿಂದ ಖರೀದಿ ಮಾಡಿದ ಜೋಳದ ಹಣವನ್ನು ಕೂಡಲೇ ರೈತರ ಖಾತೆಗೆ ಜಮಾ ಮಾಡಬೇಕು ಎಂದು ಒತ್ತಾಯಿಸಿದರು.**




ತಾಲೂಕಿನ ಜೋಳ ಖರೀದಿ ಕೇಂದ್ರಗಳಲ್ಲಿ ಹಿಂಗಾರು ಹಂಗಾಮಿನ ಜೋಳ ಖರೀದಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಬೇಕು. ತಾಲೂಕಿನ ಅನೇಕ ನೈಜ ಜೋಳ ಬೆಳೆಗಾರರ ಎಫ್‌ಐಡಿ ಲಾಕ್ ಮಾಡಿರುವುದರಿಂದ ರೈತರಿಗೆ ಜೋಳ ಮಾರಾಟ ಮಾಡಲು ಸಾಧ್ಯವಾಗುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ರೈತರ ಜಮೀನಿಗೆ ಭೇಟಿ ನೀಡಿ ನೊಂದಣಿಯನ್ನು ಅನ್‌ಬ್ಲಾಕ್ ಮಾಡಬೇಕು ಎಂದು ಆಗ್ರಹಿಸಿದರು. ಫಸಲ್ ಭೀಮಾ ಯೋಜನೆಯಡಿಯಲ್ಲಿ ವ್ಯಾಪಕ ಭ್ರಷ್ಟಾಚಾರ ನಡೆದಿದ್ದು ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ರೈತರಿಂದ ಮನವಿ ಸ್ವೀಕರಿಸಿದ ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆಯ ಜಿಲ್ಲಾ ಉಪನಿರ್ದೇಶಕರಾದ ನಜೀರ್ ಅಹ್ಮದ್ ಮಾತನಾಡಿ, ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಮೊದಲ ಹಂತದ ಹಣ ಬಿಡುಗಡೆಯಾಗಿದ್ದು ಮುಂಗಾರು ಹಂಗಾಮಿನಲ್ಲಿ ರೈತರಿಂದ ಖರೀದಿ ಮಾಡಿದ ಜೋಳದ ಹಣವನ್ನು ಶೀಘ್ರದಲ್ಲೇ ರೈತರ ಖಾತೆಗೆ ಜಮಾ ಮಾಡಲಾಗುವುದು ಎಂದು ಭರವಸೆ ನೀಡಿದರು. ತಾಲೂಕಿನಲ್ಲಿ ಹಿಂಗಾರು ಹಂಗಾಮಿನಲ್ಲಿ ಬೆಳೆದ ಜೋಳವನ್ನು ಖರೀದಿ ಕೇಂದ್ರಗಳ ಮೂಲಕ ಖರೀದಿ ಮಾಡಲು ಅಗತ್ಯ ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ, ಜಿಲ್ಲಾ ಉಗ್ರಾಣ ನಿಗಮದ ಜಿಲ್ಲಾ ವ್ಯವಸ್ಥಾಪಕ ಪ್ರಕಾಶ್, ತಾಲೂಕು ಆಹಾರ ನಿರೀಕ್ಷಕ ವಿರುಪಣ್ಣ, ಕರ್ನಾಟಕ ರಾಜ್ಯ ರೈತ ಸಂಘದ ತಾಲೂಕು ಅಧ್ಯಕ್ಷ ಸಿದ್ದಯ್ಯಸ್ವಾಮಿ, ಬಸನಗೌಡ ಬಲ್ಲಟಗಿ, ಯಂಕಪ್ಪ ಕಾರಬಾರಿ, ಲಿಂಗಾರೆಡ್ಡಿ ಪಾಟೀಲ್, ಬಸವರಾಜ ಮಾಲಿಪಾಟೀಲ್, ಬೂದಯ್ಯಸ್ವಾಮಿ, ಚಾಮರಸ ಜಾನೇಕಲ್, ಸೇರಿದಂತೆ ನೂರಾರು ರೈತರು ಇದ್ದರು.

# "ದೇವಸ್ಥಾನಕ್ಕೆ ದಕ್ಕೆ ಆಗದಂತೆ ರಸ್ತೆ ಕಾಮಗಾರಿ ಮಾಡಬೇಕು"

ನೈಜ್ಯ ದೆಸೆ ನ್ಯೂಸ್

**ಮಾನ್ವಿ: ಕೊಪ್ಪಳ ರಾಯಚೂರು ರಾಜ್ಯ ಹೆದ್ದಾರಿ ರಾಷ್ಟ್ರೀಯ ಹೆದ್ದಾರಿಯಾಗಿ ಮೇಲ್ದರ್ಗೆರಿದ ಕಾರಣ ದ್ವಿಪಥ ರಸ್ತೆಯನ್ನು ಚತುಷಥ ರಸ್ತೆಯಾಗಿ ಅಭಿರುದ್ಧಿ ಮಾಡುತ್ತಿರುವ ಹಿನ್ನೆಲೆಯಲ್ಲಿ ಪಟ್ಟಣದ ಚತುಷಥ ರಸ್ತೆ ನಿರ್ಮಾಣ ಕಾಮಗಾರಿಗೆ ಸಂಬಂಧಿಸಿದಂತೆ ರಸ್ತೆ ಗಡಿ ಗುರುತಿಸುವ ಕಾರ್ಯಕ್ಕೆ ಬಂದ ಅಧಿಕಾರಿಗಳಿಗೆ ಅಂಬೇಡ್ಕರ್ ವೃತ್ತದಲ್ಲಿರುವ ಶ್ರೀ ಮಹಾಲಕ್ಷ್ಮೀ ದೇವಸಾನಕ್ಕೆ ಯಾವುದೇ ರೀತಿಯ ಹಾನಿಯಾಗದಂತೆ ರಸ್ತೆ ಕಾಮಗಾರಿ ಕೈಗೊಳ್ಳಬೇಕು ಎಂದು ಸ್ಥಳೀಯ ಭಕ್ತರು ಹಾಗೂ ಸಾರ್ವಜನಿಕರು ಒತ್ತಾಯಿಸಿದರು.**



ಈ ಸಂದರ್ಭದಲ್ಲಿ ಶಂಕರಯ್ಯಸ್ವಾಮಿ ಸುವರ್ಣಗಿರಿ ಮಠ ಮಾತನಾಡಿ ಇಲ್ಲಿನ ಅಂಬೇಡ್ಕರ್ ವೃತ್ತದ ಬಳಿ ಇರುವ ಮಹಾಲಕ್ಷ್ಮಿ ದೇವಸ್ಥಾನ ನೂರಾರು ವರ್ಷಗಳ ಇತಿಹಾಸ ಇರುವ ಹಿನ್ನೆಲೆ ಇದೆ ಹಲವು ವರ್ಷಗಳಿಂದ ಭಕ್ತರು ಶ್ರೀ ಮಹಾಲಕ್ಷ್ಮಿ ದೇವಸ್ಥಾನದಲ್ಲಿ ನಿತ್ಯ ಪೂಜೆ ಸಲ್ಲಿಸುತ್ತಿದ್ದು ಇದು ಸಾರ್ವಜನಿಕರ ಭಕ್ತಿಯ ಕೇಂದ್ರ ಸ್ಥಾನವಾಗಿದೆ. ರಸ್ತೆ ಅಭಿರುದ್ಧಿ ಹೆಸರಲ್ಲಿ ದೇವಸ್ಥಾನಕ್ಕೆ ದಕ್ಕೆ ಮಾಡಬಾರದು ಹಾಗೂ ಭಕ್ತರ ಧಾರ್ಮಿಕ ಭಾವನೆಗಳಿಗೆ ತೊಂದರೆ ಉಂಟು ಮಾಡಬಾರದು.

ಭಕ್ತರ ಧಾರ್ಮಿಕ ಭಾವನೆಗಳಿಗೆ ಗೌರವ ನೀಡಿ ದೇವಸ್ಥಾನವನ್ನು ಉಳಿಸಿಕೊಂಡೇ ರಸ್ತೆ ಕಾಮಗಾರಿ ನಡೆಸಬೇಕು ಎಂದು ಆಗ್ರಹಿಸಿದರು. ರಸ್ತೆ ನಿರ್ಮಾಣ ಸಂಸ್ಥೆಯ ಅಧಿಕಾರಿ ವಿಶಾಲ್ ಮಾತನಾಡಿ ಗರ್ಭಗುಡಿ ಹಿಂಭಾಗದಲ್ಲಿ ಕೇವಲ 1 ಅಡಿ ಗುರುತು ಮಾಡಲಾಗಿತ್ತು ಇದರ ಮಹತ್ವ ತಿಳಿಯದೆ ಸಿಬ್ಬಂದಿಗಳು ಮಾರ್ಕ್ ಮಾಡಿದ್ದರು ನಂತರ ಸಾರ್ವಜನಿಕರ ಮನವಿಯನ್ನು ಪರಿಗಣಿಸಿ ದೇವಸ್ಥಾನಕ್ಕೆ ಹೆಚ್ಚಿನ ಹಾನಿಯಾಗದಂತೆ ರಸ್ತೆ ಕಾಮಗಾರಿ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಈ ಸಂದರ್ಭದಲ್ಲಿ ಊರಿನ ಮುಖಂಡರು, ಭಕ್ತರು, ಮಹಿಳೆಯರು, ಯುವಕರು ಹಾಗೂ ಸಾರ್ವಜನಿಕರು ಉಪಸ್ಥಿತರಿದ್ದರು.

# ನಗರದ ವಿವಿಧ್ಧ ಕಡೆ ಮೇ.14ರಂದು ವಿದ್ಯುತ್ ವ್ಯತ್ಯಯ

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಕೆಪಿಟಿಸಿಎಲ್‌ನ ಟಿಎಲ್‌ಎಮ್ ಉಪ ವಿಭಾಗದ ವ್ಯಾಪ್ತಿಯ 110/11ಕೆವಿ ಜವಾಹರ ನಗರ ಸಬ್ ಸ್ಟೇಷನ್‌ನಿಂದ ವಡವಟ್ಟಿ (ಜವಾಹರ ನಗರ ಲೈನ್) ಜಂಗಲ್ ನಿರ್ವಹಣಾ ಕಾಮಗಾರಿ ಕೈಗೊಳ್ಳುತ್ತಿರುವ ಪ್ರಯುಕ್ತ ಮೇ.14ರ ಬೆಳಿಗ್ಗೆ ಬೆಳಿಗ್ಗೆ 8 ಗಂಟೆಯಿಂದ 12ಗಂಟೆಯವರೆಗೆ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸುವಂತೆ ಕೋರಲಾಗಿದೆ.**




ಅಂದು ಬೆಳಿಗ್ಗೆ 8ರಿಂದ ರಾಯಚೂರು ನಗರದ ತಾಯಾಮ್ಮ ಕಾಲೋನಿ, ಎಮ್.ವಿ.ಜಿ ಕಾಲೋನಿ, ಇಂಡಸ್ಟ್ರಿಯಲ್ ಏರಿಯಾ, ಗದ್ವಾಲ್‌ರಸ್ತೆ, ಅಶ್ವಿನಿ ಕಾಲೋನಿ, ಪಂಚಮುಖಿ ಕಾಲೋನಿ, ವಾಸವಿ ನಗರ, ಎನ್.ಜಿ.ಓ ಕಾಲೋನಿ, ನೀಲಕಂಠೇಶ್ವರ ನಗರ, ಎಕ್ಬಾಲ್ ನಗರ, ಅಂಬೇಡ್ಕರ್ ನಗರ, ಫಾರೂಕ್‌ಅನ್ವರ್ ಕಂಪನಿ, ಅಯ್ಯ ಬೌಡಿ, ನವಾಬ ಗಡ್ಡಾ, ಗಾಜಗಾರಪೇಟೆ, ಹನುಮಾನ್‌ಟಾಕೀಸ್, ನಗರೇಶ್ವರಟೆಂಪಲ್, ಜವಾಹರ ನಗರ ಸ್ಕೂಲ್, ಬೋಲಮಾನದೊಡ್ಡಿರೋಡ್, ಹನುಮಾನ್ ಟಾಕೀಜ್, ವಿದ್ಯಾನಗರ, ವಾಸವಿ ನಗರ, ಎಲ್‌ವಿಡಿ ಕಾಲೇಜ್, ಜವಾಹರ ನಗರ, ಟೆಲಿಫೋನ್‌ಎಕ್ಸೇಚೆಂಜ್, ರಾಯಚೂರು ವಾಣಿ, ತಿಮ್ಮಾಪೂರು ಪೇಟೆ, ಪಟೇಲ್ ರೋಡ್, ಕೃಷ್ಣದೇವರಾಯನಗರ, ಶಂಕರಸಿಂಗ ಕಾಲೋನಿ, ಸೆಂಟ್ರಲ್ ಸ್ಕೂಲ್, ಮಾಣಿಕ ಪ್ರಭು ಲೇಔಟ್, ಡೆಂಟಲ್ ಕಾಲೇಜ್, ನವೋದಯ ಇಂಜಿನಿಯರಿಂಗ್ ಕಾಲೇಜ್, ವಿಜಯಲಕ್ಷ್ಮಿ ಲೇಔಟ್, ಲಕ್ಷ್ಮಣ ಲೇಔಟ್, ಅಮರಖೇಡ್ ಲೇಔಟ್, ಮಾಣಿಕ ನಗರ, ಗರ?ನಮೆಂಟ್ ಪಾಲಿಟೆಕ್ನಿಕ್, ಐಟಿಐ ಕಾಲೇಜ್, ಸಾವಿತ್ರಿ ಕಾಲೋನಿ, ನಿರ್ಮಿತಿ ಕೇಂದ್ರ ಮತ್ತು ನಿರ್ಮಿತಿ ಕೇಂದ್ರದ ಸುತ್ತಮುತ್ತಲಿನ ಪ್ರದೇಶ, ನಿಸರ್ಗ ಲೇಔಟ್ ಮತ್ತು ನಿಸರ್ಗ ಲೇಔಟ್‌ನ ಸುತ್ತಲಿನ ಎಲ್ಲಾ ಸರಕಾರಿ ಶಾಲಾ ವಸತಿ ನಿಲಯಗಳು, ಮೊರಾರ್ಜಿ ದೆಸಾಯಿ ವಸತಿ ನಿಲಯ, ಗದ್ವಾಲ್ ರೋಡ್, ಅಯ್ಯಾಳಪ್ಪ ಸರ್ಕಲ್, ಅಶ್ವಿನಿ ಕಾಲೋನಿ, ಜಲಾಲ್‌ನಗರ, ಮಡ್ಡಿಪೇಟೆ, ಬಸವನಭಾವಿ ಸರ್ಕಲ್, ಮಾರ್ಕೆಟ್ ಯಾರ್ಡ್, ಗಂಜ್ ಏರಿಯಾ, ಸಿಯಾತಾಲಾಬ್‌ನ ಕೆಲವು ಪ್ರದೇಶ, ಸುದ್ದಿಮೂಲ ದಿನಪತ್ರಿಕೆ, ಕ್ಲಾರಿಟಿ ಡಯಾಗ್ನಾಸ್ ಸೆಂಟರ್, ಪೂರ್ಣಿಮಾ ಟಾಕೀಸ್ ಹೊಸ ಶಿವಮ್ ಆಸ್ಪತ್ರೆಯ ಸುತ್ತಮುತ್ತಲಿನ ಪ್ರದೇಶದಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ. ಹೆಚ್ಚಿನ ಮಾಹಿತಿಗಾಗಿ 24*7 ಗ್ರಾಹಕರ ಸೇವಾ ಕೇಂದ್ರದ ದೂರವಾಣಿ ಸಂಖ್ಯೆ: 08532–226386, 08532–231999ಗೆ ಸಂಪರ್ಕಿಸಿದಂತೆ ಜೆಸ್ಕಾಂ ಕಾರ್ಯ ಮತ್ತು ಪಾಲನೆ ಉಪ ವಿಭಾಗದ ಕಾರ್ಯನಿರ್ವಾಹಕ ಅಭಿಯಂತರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಆಗಸ್ಟ್ 21ರಿಂದ ಆಗಸ್ಟ್ 23ರವರೆಗೆ ಸಮಾಧಾನ್ ಸಮರೋಹ್: ನ್ಯಾ. ಸಿದ್ಧರಾಮಪ್ಪ ಕಲ್ಯಾಣರಾವ್

ನೈಜ್ಯ ದೆಸೆ ನ್ಯೂಸ್

**ರಾಯಚೂರು: ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ಸೌಹಾರ್ದಯುತವಾಗಿ ಇತ್ಯರ್ಥಪಡಿಸಿಕೊಳ್ಳಲು ಸರ್ವೋಚ್ಚ ನ್ಯಾಯಾಲಯವು ಸಮಾಧಾನ್ ಸಮರೋಹ್ ಎನ್ನುವ ವಿಶೇಷ ಲೋಕಾ ಅದಾಲತ್ ಅನ್ನು 2026ರ ಆಗಸ್ಟ್ 21 ರಿಂದ 23ರವರೆಗೆ ಆಯೋಜಿಸಲಾಗಿದೆ ಎಂದು ಪ್ರಧಾನ ಹಿರಿಯ ವ್ಯವಹಾರ ನ್ಯಾಯಾಧೀಶರು ಮತ್ತು ಮು.ನ್ಯಾ.ದಂ.ಗಳು, ಹಿರಿಯ ಶ್ರೇಣಿ ದಿವಾಣಿ ನ್ಯಾಯಾಧೀಶರು ಹಾಗೂ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಭಾರಿ ಸದಸ್ಯ ಕಾರ್ಯದರ್ಶಿಗಳಾದ ಸಿದ್ಧರಾಮಪ್ಪ ಕಲ್ಯಾಣರಾವ್ ಅವರು ತಿಳಿಸಿದ್ದಾರೆ.**



ವಿಶೇಷ ಲೋಕ್ ಅದಾಲತ್ ಅನ್ನು ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳನ್ನು ತ್ವರಿತವಾಗಿ ನಿವಾರಣೆ ಮಾಡುವ ಉದ್ದೇಶದಿಂದ ರಾಜ್ಯದ ಎಲ್ಲಾ ಜಿಲ್ಲಾ ಮತ್ತು ತಾಲೂಕು ನ್ಯಾಯಾಲಯಗಳ ನ್ಯಾಯಾಧೀಶರೊಂದಿಗೆ ವಿಡಿಯೋ ಸಂವಾದ ಸಭೆ ನಡೆಸಲಾಯಿತು. ಕರ್ನಾಟಕ ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರ ವಿಡಿಯೋ ಕಾನ್ಸರೆನ್ಸ್ ಮೂಲಕ ನಡೆದ ಈ ಮಹತ್ವದ ಸಭೆಯಲ್ಲಿ ಸುಪ್ರೀಂಕೋರ್ಟ್ ನ ಮಾರ್ಗದರ್ಶನದಂತೆ ಬಾಕಿ ಇರುವ ಪ್ರಕರಣಗಳ ಶೀಘ್ರ ವಿಲೇವಾರಿ ಕುರಿತು ಚರ್ಚೆ ನಡೆಸಲಾಯಿತು.

ಈ ವೇಳೆ ಕರ್ನಾಟಕದ ನಾನಾ ಜಿಲ್ಲೆಗಳ ನ್ಯಾಯಾಧೀಶರು ಭಾಗವಹಿಸಿ, ತಮ್ಮ ತಮ್ಮ ನ್ಯಾಯಾಲಯಗಳಲ್ಲಿ ಬಾಕಿ ಇರುವ ಪ್ರಕರಣಗಳ ಸ್ಥಿತಿಗತಿ ಹಾಗೂ ಪರಿಹಾರ ಕ್ರಮಗಳ ಬಗ್ಗೆ ವಿವರಿಸಿದರು. ಅಧಿಕಾರಿಗಳು, ಪ್ರಕರಣಗಳನ್ನು ನ್ಯಾಯಾಲಯದ ಹೊರಗಡೆಯೇ ಪರಸ್ಪರ ಸಮಾಧಾನದಿಂದ (ರಾಜಿ) ಬಗೆಹರಿಸುವ ವ್ಯವಸ್ಥೆಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ನ್ಯಾಯಾಲಯಗಳ ಮೇಲಿನ ಭಾರ ಕಡಿಮೆಯಾಗುವುದಲ್ಲದೆ, ಸಾರ್ವಜನಿಕರಿಗೆ ಕಡಿಮೆ ಅವಧಿಯಲ್ಲಿ ನ್ಯಾಯ ದೊರಕಲು ಸಹಕಾರಿ ಆಗಲಿದೆ. ಈ ಸಭೆಯು ನ್ಯಾಯಾಂಗ ವ್ಯವಸ್ಥೆಯನ್ನು ಹೆಚ್ಚು ಪರಿಣಾಮಕಾರಿ ಮತ್ತು ಜನಸ್ನೇಹಿಯಾಗಿಸಲು ಒಂದು ಪ್ರಮುಖ ಹೆಜ್ಜೆಯಾಗಿದ್ದು, ಸರ್ವೋಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣಗಳ ನಿವಾರಣೆಗೆ ಹೊಸ ದಿಕ್ಕು ತೋರಿಸಲಿದ್ದು, ಎಲ್ಲಾ ವಕೀಲರು, ಕಕ್ಷಿದಾರರು, ಸರ್ವೋಚ್ಚನ್ಯಾಯಾಲಯದಲ್ಲಿ ಬಾಕಿ ಇರುವ ಎಲ್ಲಾ ಬಗೆಯ ಕೇಸುಗಳನ್ನು ವಿಶೇಷ ಲೋಕ ಅದಾಲತ್ ನಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇತ್ಯರ್ಥಪಡಿಸಿಕೊಳ್ಳಬೇಕೆಂದು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಪ್ರಭಾರಿ ಸದಸ್ಯ ಕಾರ್ಯದರ್ಶಿಗಳಾದ ಸಿದ್ಧರಾಮಪ್ಪ ಕಲ್ಯಾಣರಾವ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಬರೀಶ್ ಚಂದನ ಶುಭ ವಿವಾಹ ಶಾಸಕ ಬಿ ಎಂ ನಾಗರಾಜ ಅವರಿಂದ ಆಶೀರ್ವಾದ

ನೈಜ್ಯ ದೆಸೆ ನ್ಯೂಸ್

**ಸಿರುಗುಪ್ಪ: ನಗರದ ವಿ ವೈ ಸಿಟಿ ಮಾಲೀಕರು ವಿ. ದತ್ತಾತ್ರೇಯ ರಾಜೇಶ್ವರಿ ರವರ ತೃತಿಯ ಸುಪುತ್ರ ವಿ.ಶಬರೀಶ್ ಹೊಸಪೇಟೆ ವಿಜಯಕುಮಾರ್ ಎಸ್.ಲಕ್ಷ್ಮಿ ರವರ ತೃತಿಯ ಸುಪುತ್ರಿ ಎಸ್. ಚಂದನ ಬಳ್ಳಾರಿ ರಸ್ತೆ ಕಮ್ಮವಾರಿ ಫಂಕ್ಷನ್ ಹಾಲ್ ನಲ್ಲಿ ಜರುಗಿದ ಶುಭ ವಿವಾಹ ಮಹೋತ್ಸವದಲ್ಲಿ ಸಿರುಗುಪ್ಪ ವಿಧಾನಸಭಾ ಕ್ಷೇತ್ರದ ಜನಪ್ರಿಯ ಶಾಸಕರಾದ ಬಿ ಎಂ ನಾಗರಾಜ, ಮಾಜಿ ಶಾಸಕರು ಟಿ ಎಂ ಚಂದ್ರಶೇಖರಯ್ಯ ಸ್ವಾಮಿ, ಎಂ ಎಸ್ ಸೋಮಲಿಂಗಪ್ಪ, ರಾಯಚೂರು ಜಿಲ್ಲೆ ಮಸ್ಕಿ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕರು ಪ್ರತಾಪ್ ಗೌಡ ಪಾಟೀಲ್ ಅವರು ನವ ದಂಪತಿಗಳಿಗೆ ಭಗವಂತನ ಪರಮ ಕೃಪೆ ಇರಲಿ ನಿಮ್ಮ ಜೀವನವು ಸುಖಕರವಾಗಿರಲೆಂದು ಆಶೀರ್ವದಿಸಿ ಹಾರೈಸಿದರು .**



ತಾಲೂಕು ಪಂಚಾಯತ್ ಮಾಜಿ ಅಧ್ಯಕ್ಷರು ಎಂ. ಗೋಪಾಲ ರೆಡ್ಡಿ, ಜಿಲ್ಲಾ ಪರಿಷತ್ ಮಾಜಿ ಸ್ಥಾಯಿ ಸಮಿತಿ ಅಧ್ಯಕ್ಷರು ಹಿರಿಯ ವಕೀಲರು ಹೆಚ್ ಕೆ ಮಲ್ಲಿಕಾರ್ಜುನಯ್ಯ ಸ್ವಾಮಿ, ಬಳ್ಳಾರಿ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಉಪಾಧ್ಯಕ್ಷರು ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರು ಎನ್. ಕರಿಬಸಪ್ಪ, ಬಿಜೆಪಿ ತಾಲೂಕ ಅಧ್ಯಕ್ಷರು ಕುಂಟ್ನಾಳ್ ಮಲ್ಲಿಕಾರ್ಜುನ ಸ್ವಾಮಿ, ಮಹರ್ಷಿ ವಾಲ್ಮೀಕಿ ವಿದ್ಯಾಭಿವೃದ್ಧಿ ಸಂಘದ ತಾಲೂಕ ಅಧ್ಯಕ್ಷರು ಬಿ ಎಂ ಸತೀಶ್, ಕಾಂಗ್ರೆಸ್ ಹಿರಿಯ ಮುಖಂಡರು ಬಿ.ಜಿ.ಆರ್. ಮಂಜುನಾಥ ರೆಡ್ಡಿ, ಪಿ ಎಲ್ ಡಿ ಬ್ಯಾಂಕ್ ಅಧ್ಯಕ್ಷರು ಚೊಕ್ಕ ಬಸವನಗೌಡ, ಗೊರವರ ಶ್ರೀನಿವಾಸ,ಸಾಮಾಜಿಕ ಕಾರ್ಯಕರ್ತ ಸಾಕ್ಷರತಾ ಅಬ್ದುಲ್ ನಬಿ,ನಗರಸಭೆ ಮಾಜಿ ಸದಸ್ಯರಾದ ಕಾಯಿಪಲ್ಲೆ ಆರ್ ನಾಗರಾಜ, ಅನ್ಸಾರಿ ಇಸಾಕ್, ಹಂಡಿ ಹಾಶಿಮ್, ಈದ್ಗಾ ಮತ್ತು ಖಬರ್ ಸ್ಥಾನ್ ಕಮಿಟಿಯ ಚಿಟಗಿ ಎಸ್ ಹುಸೇನ್ ಬಾಷಾ,

ಚಿದಾನಂದ ರಾಯುಡು, ಡಾ ಬಿ ಆರ್ ಅಂಬೇಡ್ಕರ್ ಸಂಘದ ತಾಲೂಕ ಅಧ್ಯಕ್ಷ ಕೊಡ್ಲೆ ಮಲ್ಲಿಕಾರ್ಜುನ, ವಿ.ನಾಗರಾಜ ವಿ.ಅನ್ನಪೂರ್ಣ,



ಹೊಸಪೇಟೆ ಬಿ.ರಂಗಪ್ಪ ನಾಗರತ್ನ, ಡಿ. ಲೋಕನಾಥ್ ಕಲ್ಪನಾ, ಕೆ. ವಸಂತ್ ಪದ್ಮಜಾ, ಜೆ. ಪರಮೇಶ್ ಮಂಜುಳಾ ರಾಣಿ, ಜೆ.ಡಿ.ರಾಘವೇಂದ್ರ ವಿಜಯಲಕ್ಷ್ಮಿ, ಜೆ.ಡಿ.ಬಾಲಾಜಿ ಶಾಂತ, ಜೆ.ಡಿ. ಮಂಜುನಾಥ ಪುಷ್ಪ, ದಾವಣಗೆರೆ ಆರ್. ಅಶೋಕ್ ಶಶೀಕಲಾ, ಮಸ್ಕಿ ಬಿ.ಮೌನೇಶ ನಾಯಕ, ಮಲ್ಲಿಕಾ ಬೆಂಗಳೂರು ಡಾ ಶ್ರೀಕಾಂತ್, ಬಾಸುರ್ ಗೋದಾವರಿ ವಾಣಿಜ್ಯೋದ್ಯಮಿ ವಿ. ಶ್ರೀನಿವಾಸ್ ಪ್ರಸಾದ್, ಕಾರಟಗಿ ಮಂಜುನಾಥ ಶ್ರೀ ಲೇಖಾ, ವಿ.ಫನಿರಾಜ್ ರಜನಿ, ವಿ.ಶ್ರೀಕಾಂತ್ ಉಮಾ, ವಿ. ಸಚಿನ್ ರಶ್ಮಿ , ವಿ. ಶ್ರೀ ನವ್ಯ ಅಭಿಷೇಕ್, ವಿ.ಅಮರೇಶಪ್ಪ ಪುಷ್ಪಾವತಿ, ಜೆ.ಧರ್ಮರಾಜ ದುಗ್ಗಮ್ಮ, ಎನ್. ಕುಮಾರಸ್ವಾಮಿ ನಾರಾಯಣಮ್ಮ, ಮಸ್ಕಿ ಬಿ. ಸುಕುಮುನ್ನೇಪ್ಪ ಶಿವಮ್ಮ, ಬಳ್ಳಾರಿ ಟಿ.ನೀಲಪ್ಪ ಪಾರ್ವತಮ್ಮ, ರಿತ್ವಿ, ವಿವಿಕಾ, ಮೇದಾಂಶ, ಎಂ.ತೇಜಸ್.

ಎಂ.ಧನ್ಯತ, ತೆಕ್ಕಲಕೋಟೆ ಮಲ್ಲಿಕಾರ್ಜುನ ಬಾಲಪ್ಪ, ವಿ. ನಾಗರಾಜ ಶೆಟ್ಟಿ ,ಮಾಜಿ ಶಾಸಕರು ಎಂ ದೊಡ್ಡನಗೌಡ ಅವರ ಮಗ ಮರಿ ರಾಜೇಗೌಡ, ಬಾಗೇವಾಡಿ ಪಿ. ಯೋಗಿರಾಜ, ವೈ. ರಾಮಸ್ವಾಮಿ ಸೌಕಾರ್, ನಟರಾಜ ವಜ್ರಗಿರಿ, ಎನ್ ಜಿ ಲಿಂಗಣ್ಣ, ಬಿ.ವೆಂಕಟೇಶ್, ಹೆಚ್.ಗಣೇಶ್, ಬಿ.ಉಮೇಶ್ ಗೌಡ, ಬಿ ಎಂ ಅನಿಲ್ ನಾಯಕ್, ತಿಮ್ಮಯ್ಯ ನಾಯಕ್, ಹಿರಿಯ ವಕೀಲರು ಎಡಗಿನಹಾಳ್ ವೆಂಕಟೇಶ್ ನಾಯಕ್, ದಸ್ತಗೀರ್ ಸಾಬ್, ಎಸ್ ಆರ್ ವಿಕ್ರಂ, ಬಿ ಎಂ ಮಣಿಕಂಠ ನಾಯಕ್, ಮತ್ತಿತರರು ವಿರುಪಾಪೂರದ ವೆಂಕೋಬಣ್ಣ ಯಶೋದಮ್ಮ ಕುಟುಂಬದವರ ವರ್ಗಕ್ಕೆ ಶುಭ ಹಾರೈಸಿದರು. ವರದಿ :ಮಸೀದಿ, ಅಬ್ದುಲ್ ಗೌಸ್, ಸಿರುಗುಪ್ಪ

## ಶಿಕ್ಷಣ ಮಾರ್ಗದರ್ಶಿ ವಿಶೇಷ

### ಐಟಿಐ ಮೆಷಿನಿಸ್ಟ್

ಐಟಿಐ ಮೆಷಿನಿಸ್ಟ್ (ITI Machinist) ಎನ್ನುವುದು ಕೈಗಾರಿಕೆಗಳಲ್ಲಿ ಬಳಸಲಾಗುವ ಲೋಹದ ಯಂತ್ರಗಳು ಮತ್ತು ಉಪಕರಣಗಳ ಬಗ್ಗೆ ತರಬೇತಿ ನೀಡುವ 2 ವರ್ಷಗಳ (24 ತಿಂಗಳು) ತಾಂತ್ರಿಕ ಕೋರ್ಸ್ ಆಗಿದೆ. ಇದು ಎನ್‌ಸಿವಿಟಿ (NCVT) ಮಾನ್ಯತೆ ಪಡೆದ ಎಂಜಿನಿಯರಿಂಗ್ ಕೋರ್ಸ್ ಆಗಿದ್ದು, ಯಂತ್ರಗಳ ಬಳಕೆ ಮತ್ತು ಉತ್ಪಾದನಾ ಪ್ರಕ್ರಿಯೆಯ ಮೇಲೆ ಕೇಂದ್ರೀಕರಿಸುತ್ತದೆ. ಕೋರ್ಸ್‌ನ ಪ್ರಮುಖ ವಿವರಗಳು: ಅರ್ಹತೆ: ಗಣಿತ ಮತ್ತು ವಿಜ್ಞಾನ ವಿಷಯಗಳೊಂದಿಗೆ 10ನೇ ತರಗತಿ (SSLC) ಉತ್ತೀರ್ಣರಾಗಿರಬೇಕು. ಅವಧಿ: 2 ವರ್ಷಗಳು (4 ಸೆಮಿಸ್ಟರ್‌ಗಳು). ಕಲಿಯುವ ವಿಷಯಗಳು: ಲ್ಯಾಥ್, ಮಿಲ್ಲಿಂಗ್, ಡ್ರಿಲ್ಲಿಂಗ್, ಮತ್ತು ಗ್ರೈಂಡಿಂಗ್ ಯಂತ್ರಗಳ ಬಳಕೆ.CNC (Computer Numerical Control) ಯಂತ್ರಗಳ ಕಾರ್ಯಾಚರಣೆ. ಇಂಜಿನಿಯರಿಂಗ್ ಡ್ರಾಯಿಂಗ್ ಮತ್ತು ವರ್ಕ್‌ಶಾಪ್ ಸೈನ್ಸ್.ಪ್ರಮಾಣಪತ್ರ: ಕೋರ್ಸ್ ಮುಗಿದ ನಂತರ NCVT ಯಿಂದ ನ್ಯಾಷನಲ್ ಟ್ರೇಡ್ ಸರ್ಟಿಫಿಕೇಟ್ (NTC) ನೀಡಲಾಗುತ್ತದೆ. ಉದ್ಯೋಗಾವಕಾಶಗಳು:ಈ ಕೋರ್ಸ್ ಪೂರ್ಣಗೊಳಿಸಿದ ನಂತರ ಮೆಷಿನಿಂಗ್ ಆಪರೇಟರ್, CNC ಪ್ರೊಗ್ರಾಮರ್, ಮತ್ತು ಟೂಲ್ & ಡೈ ಮೇಕರ್ ಆಗಿ ಉತ್ಪಾದನಾ ಘಟಕಗಳು (Manufacturing Industries) ಹಾಗೂ ಆಟೋಮೊಬೈಲ್ ಕಂಪನಿಗಳಲ್ಲಿ ಉದ್ಯೋಗ ಪಡೆಯಬಹುದು.

**ನೈಋತ್ಯ ದೆಸೆ**
**ಕನ್ನಡ ದಿನಪತ್ರಿಕೆಯನ್ನು ತಪ್ಪದೆ ಓದಿರಿ.**

## ಜೀವಗಳನ್ನು ಉಳಿಸುವಲ್ಲಿ ದಾದಿಯರ ಸೇವೆ ಸಮಾಜಕ್ಕೆ ಅಮೂಲ್ಯವಾದದ್ದು : ಅಮರಮ್ಮ ಶುಶ್ರೂಷಕಿ

**ನೈಋತ್ಯ ದೆಸೆ ನ್ಯೂಸ್**

**ಸಿಂಧನೂರು: ತಾಲೂಕಿನ ಸಮೀಪದ ಪ್ರಾಥ-ಮಿಕ ಆರೋಗ್ಯ ಕೇಂದ್ರ ಜವಳಗೇರಾದಲ್ಲಿ ಅಂತರರಾಷ್ಟ್ರೀಯ ದಾದಿಯರ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು ಕಾರ್ಯಕ್ರಮದಲ್ಲಿ ಫ್ಲಾರೆನ್ಸ್ ನೈಟಿಂಗೇಲ್ ಅವರು ಭಾವಚಿತ್ರಕ್ಕೆ ಪೂಜೆ ಸಲ್ಲಿಸಲಾಯಿತು.**

ಅಂತರರಾಷ್ಟ್ರೀಯ ದಾದಿಯರ ದಿನಾಚರಣೆ ಅಂಗವಾಗಿ ಪ್ರತಿ ವರ್ಷ ಮೇ 12 ರಂದು ಆಧುನಿಕ ಶುಶ್ರೂಷೆಯ ಸಂಸ್ಥಾಪಕಿ ಫ್ಲಾರೆನ್ಸ್ ನೈಟಿಂಗೇಲ್. ಅವರು ಜನ್ಮದಿನದಂದು ದಾದಿಯರ ಸಮಾಜಕ್ಕೆ ನೀಡುವ ಅಮೂಲ್ಯವಾದ ಸೇವೆ ಕೊಡುಗೆ ಮತ್ತು ತ್ಯಾಗವನ್ನು ಸ್ಮರಿಸಿ ಲಾಗುತ್ತಿದೆ,



ಅಮರಮ್ಮ ಶುಶ್ರೂಷಕ್ಕಿ ಮಾತನಾಡಿದರು. ನಂತರ ಮಾತನಾಡಿದ ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಬಾಲಪ್ಪ ನಾಯಕ ದಾದಿಯರು. ರೋಗಿಗಳ ಆರೈಕೆ ಅವರಿಗೆ ಮಾನಸಿಕ ಹಾಗೂ ಭಾವನಾತ್ಮಕ ಬೆಂಬಲ ನೀಡುವ ಮೂಲಕ ಜೀವಗಳನ್ನು ಉಳಿಸುವಲ್ಲಿ ವೈದ್ಯರಷ್ಟೆ ಪ್ರಮುಖ ಪಾತ್ರ ವಹಿಸುತ್ತಾರೆ. ಹಗಲು ರಾತ್ರಿ ಎನ್ನದೆ ರೋಗಿಗಳು ಆರೈಕೆಯಲ್ಲಿ ಇವರ ಸೇವೆ ನೀಡುತ್ತಿರುವುದು ಶ್ಲಾಘನೀಯವಾಗಿದೆ. ರೋಗಿಗಳು. ಅನಾರೋಗ್ಯದಿಂದ ಚೇತ-ರಿಸಿಕೊಳ್ಳಲು ವೈದ್ಯರ ಚಿಕಿತ್ಸೆ ಮತ್ತು ಔಷಧ ಮಹತ್ವದ ಪಾತ್ರವನ್ನು ವಹಿಸಿದ್ದರು ಶೀಘ್ರ ಗುಣಮುಖವಾಗಲು ಸರಿಯಾದ ಆರೈಕೆ ಕೂಡ ಅಷ್ಟೇ ಅಗತ್ಯ ಈ ಆರೈಕೆಯನ್ನು ಅತ್ಯಂತ ನಿಷ್ಠೆ ಮತ್ತು ಪ್ರಾಮಾಣಿಕತೆ ಮತ್ತು ತಾಳ್ಮೆಯಿಂದ ನೀಡುವ ದಾದಿಯರು ಮತ್ತು ಅವರು ರೋಗಿಗಳ ಹಾಸಿಗೆಯ ಬಳಿ ನಿಂತುಕೊಂಡು ಅವರ ನೋವನ್ನು ಅರ್ಥೈಸಿಕೊಂಡು ಸಾಮಾಜಿಕ ಮತ್ತು ಮಾನಸಿಕ ಬೆಂಬಲ ನೀಡುತ್ತಾ ಒಟ್ಟಾರೆಯಾಗಿ ದಾದಿಯರ ಆರೋಗ್ಯ ವ್ಯವಸ್ಥೆಯ ಆಧಾರ ಸ್ತಂಭವಾಗಿದ್ದಾರೆ ಎಂದರು. ಈ ಸಂದರ್ಭದಲ್ಲಿ ಫಾರ್ಮಸಿಸ್ಟ್ ಅಧಿಕಾರಿ ದೀಪು ರಾಯ್ ಆರೋಗ್ಯ ನಿರೀಕ್ಷಣಾಧಿಕಾರಿಗಳಾದ ಮಹೇಶ. ಉದಯಕುಮಾರ. ಅಂಬಮ್ಮ ಪ್ರಾಥಮಿಕ ಆರೋಗ್ಯ ಸುರಕ್ಷತಾ ಅಧಿಕಾರಿಗಳಾದ ನಿಂಗಮ್ಮ. ರಾಧಾ ಕೊಂಡಿ. ಆರೋಗ್ಯ ಇಲಾಖೆಯ ಸಿಬ್ಬಂದಿಗಳಾದ ವಿಜಯಲಕ್ಷ್ಮಿ. ಚಂದ್ರಕಲಾ ಹಾಗೂ. ಇನ್ನಿತರರು ಉಪಸ್ಥಿರಿದ್ದರು

## ಸರ್ವೋದಯ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜಿನಲ್ಲಿ ಅಂತರಾಷ್ಟ್ರೀಯ ನರ್ಸಿಂಗ್ ದಿನಾಚರಣೆ




**ನೈಋತ್ಯ ದೆಸೆ ನ್ಯೂಸ್**

**ಮಾನ್ವಿ: ಸರ್ವೋದಯ ಸ್ಕೂಲ್ ಆಫ್ ನರ್ಸಿಂಗ್ ಕಾಲೇಜು ವತಿಯಿಂದ ಅಂತರಾಷ್ಟ್ರೀಯ ನರ್ಸಿಂಗ್ ದಿನಾಚರಣೆಯನ್ನು ಆಚರಿಸಲಾಯಿತು.**

**ಕಾರ್ಯಕ್ರಮವನ್ನು ವಿದ್ಯಾರ್ಥಿಗಳಲ್ಲಿ ನರ್ಸಿಂಗ್ ವೃತ್ತಿಯ ಮಹತ್ವ, ಸೇವಾ ಮನೋಭಾವ ಹಾಗೂ ಆರೋಗ್ಯ ಕ್ಷೇತ್ರದಲ್ಲಿ ನರ್ಸ್‌ಗಳ ಪಾತ್ರದ ಕುರಿತು ಜಾಗೃತಿ ಮೂಡಿಸುವ ಉದ್ದೇಶದಿಂದ ಆಯೋಜಿಸಲಾಗಿತ್ತು.**

ದಿನಾಚರಣೆ ಅಂಗವಾಗಿ ವಿದ್ಯಾರ್ಥಿಗಳಿಗೆ ವಿವಿಧ ರೀತಿಯ ಕ್ರೀಡಾಕೂಟಗಳು, ಮನೋರಂಜನಾ ಕಾರ್ಯಕ್ರಮಗಳು ಹಾಗೂ ಸಾಂಸ್ಕೃತಿಕ ಚಟುವಟಿಕೆಗಳನ್ನು ಹಮ್ಮಿಕೊಳ್ಳಲಾಗಿತ್ತು. ವಿದ್ಯಾರ್ಥಿಗಳು ಉತ್ಸಾಹದಿಂದ ಭಾಗವಹಿಸಿ ಕಾರ್ಯಕ್ರಮದ ಮೆರುಗು ಹೆಚ್ಚಿಸಿದರು. ಕಾರ್ಯಕ್ರಮದಲ್ಲಿ ಸರ್ವೋದಯ ಶಿಕ್ಷಣ ಸಂಸ್ಥೆಯ ಅಧ್ಯಕ್ಷರು ಮನೋಜ್ ಕುಮಾರ್ ಮಿಶ್ರಾ ಅವರು ಮಾತನಾಡಿ, "ನರ್ಸಿಂಗ್ ವೃತ್ತಿ ಮಾನವೀಯ ಸೇವೆಯ ಪ್ರತೀಕವಾಗಿದೆ. ವಿದ್ಯಾರ್ಥಿಗಳು ಸೇವಾ ಮನೋಭಾವದೊಂದಿಗೆ ಸಮಾಜಕ್ಕೆ ಉತ್ತಮ ಆರೋಗ್ಯ ಸೇವೆ ನೀಡಬೇಕು" ಎಂದು ತಿಳಿಸಿದರು. ಇದೇ ವೇಳೆ ರೋಧ ಶಿಕ್ಷಣ ಸಂಸ್ಥೆ ಕಾರ್ಯದರ್ಶಿಗಳಾದ ಅನಿಲ್ ಕುಮಾರ್ ಹೆಚ್ ಅವರು ಮಾತನಾಡಿ, ವಿದ್ಯಾರ್ಥಿಗಳು ವಿದ್ಯಾಭ್ಯಾಸದ ಜೊತೆಗೆ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿಯೂ ಸಕ್ರಿಯವಾಗಿ ಭಾಗವಹಿಸುವುದು ಅಗತ್ಯ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಪರೀಕ್ಷೆಯಲ್ಲಿ ಪ್ರಥ-ಮ ಸ್ಥಾನ ಪಡೆದ ವಿದ್ಯಾರ್ಥಿಗಳನ್ನು ಸನ್ಮಾನಿಸಿ ಗೌರವಿಸಲಾಯಿತು. ಪ್ರಥಮ ವರ್ಷದ ವಿದ್ಯಾರ್ಥಿನಿ ಸಾನಿಯಾ (ತಂದೆ: ಮೌಲಾಲಿ) ಅವರು 73 ಪ್ರತಿಶತ ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದರು. ದ್ವಿತೀಯ ವರ್ಷದ ವಿದ್ಯಾರ್ಥಿನಿ ಗೀತಾ (ತಂದೆ: ದುರ್ಗಪ್ಪ) ಅವರು 82 ಪ್ರತಿಶತ ಅಂಕಗಳೊಂದಿಗೆ ಪ್ರಥಮ ಸ್ಥಾನ ಪಡೆದರು. ತೃತೀಯ ವರ್ಷದ ವಿದ್ಯಾರ್ಥಿನಿ ಸಾನಿಯಾ (ತಂದೆ: ರುಸ್ತುಮ್ ಪಾಷಾ) ಅವರು 83.75 ಪ್ರತಿಶತ ಅಂಕಗಳೊಂದಿಗೆ ಕಾಲೇಜಿಗೆ ಪ್ರಥಮ ಶ್ರೇಣಿ ತಂದು ಹೆಮ್ಮೆ ಈ ಎಲ್ಲಾ ವಿದ್ಯಾರ್ಥಿಗಳನ್ನು ಮನೋಜ್ ಕುಮಾರ್ ಮಿಶ್ರ ಹಾಗೂ ಅನಿಲ್ ಕುಮಾರ್ ಅವರು ಸನ್ಮಾನಿಸಿ ಗೌರವಿಸಿದರು.

ಕಾರ್ಯಕ್ರಮದಲ್ಲಿ ಕಾಲೇಜಿನ ಆಡಳಿತ ಅಧಿಕಾರಿ ದತ್ತಾತ್ರೇಯ ಮೇಟಿ ಸರ್ವೋದಯ ಪಿಯು ಕಾಲೇಜಿನ ಪ್ರಾಚಾರ್ಯರು ರೇಣುಕಾ ಶಿಕ್ಷಕ ವೃಂದ, ಸಿಬ್ಬಂದಿ ಹಾಗೂ ವಿದ್ಯಾರ್ಥಿಗಳು ಭಾಗವಹಿಸಿ ದಿನಾಚರಣೆಯನ್ನು ಯಶಸ್ವಿಗೊಳಿಸಿದರು. ಕೊನೆಯಲ್ಲಿ ವಿಜೇತ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ ನಡೆಸಲಾಯಿತು.

## ನೂತನ ಜಿಲ್ಲಾಧಿಕಾರಿಯಾದ ಪೂವಿತಾ ಅವರಿಗೆ ಸಿಂಧನೂರಿನ ಕಾರುಣ್ಯಾಶ್ರಮದಿಂದ ಗೌರವ

**ನೈಋತ್ಯ ದೆಸೆ ನ್ಯೂಸ್**

**ಸಿಂಧನೂರು: ರಾಯಚೂರು ಜಿಲ್ಲೆಯ ನೂತನ ಜಿಲ್ಲಾಧಿಕಾರಿಯಾಗಿ ಅಧಿಕಾರ ಸ್ವೀಕರಿಸಿಕೊಂಡಿರುವ ಪೂವಿತಾ. ಎಸ್. ಅವರಿಗೆ ಸಿಂಧನೂರಿನ ಕರ್ನಾಟಕ ಸರ್ಕಾರದ ರಾಜ್ಯ ಪ್ರಶಸ್ತಿ ಪುರಸ್ಕೃತ ಸಂಸ್ಥೆಯಾದ ಶ್ರೀಮಠ ಸೇವಾ ಟ್ರಸ್ಟ್(ರಿ) ಹರೇಟನೂರು ಕಾರುಣ್ಯ ನೆಲೆ ವೃದ್ಧಾಶ್ರಮ ಹಾಗೂ ವಯಸ್ಕರ ಬುದ್ಧಿಮಾಂದ್ಯ ಆಶ್ರಮದಿಂದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಸನ್ಮಾನಿಸಿ ಗೌರವಿಸಿ ನೆನಪಿನ ಕಾಣಿಕೆಯನ್ನು ವಿತರಿಸಿ ಆಶ್ರಮಕ್ಕೆ ಆಹ್ವಾನಿಸಿದರು.**

ಈ ಸಮಯದಲ್ಲಿ ಆಶ್ರಮಕ್ಕೆ ಸ್ವಂತ ಜಾಗ ಇಲ್ಲದಿರುವುದು ಹಾಗೂ ಅನುದಾನ ಇಲ್ಲದಿರುವುದನ್ನು ಜಿಲ್ಲಾಧಿಕಾ-ರಿಗಳ ಗಮನಕ್ಕೆ ತರಲಾಯಿತು. ನಂತರ ಜಿಲ್ಲಾಧಿಕಾರಿಗಳು ಒಮ್ಮೆ ಆಶ್ರಮಕ್ಕೆ ಭೇಟಿ




ನೀಡಿ ಪರಿಶೀಲನೆ ಮಾಡುವುದಾಗಿ ಭರವಸೆ ನೀಡಿದರು. ಈ ಸಂದರ್ಭದಲ್ಲಿ ಆಶ್ರಮದ ಕಾರ್ಯಾಧ್ಯಕ್ಷರಾದ ಡಾ. ಚನ್ನಬಸವ ಸ್ವಾಮಿ ಹಿರೇಮಠ ಸಿಬ್ಬಂದಿಯಾದ ಮರಿಯಪ್ಪ ನಾಯಕ. ರಡ್ಡಿ ಲೀಡರ್ ಅಮೀನಗಡ. ಅಮರೇಶ ಪಾಟೀಲ್ ರೇಕಲಮರಡಿ ಹಾಗೂ ಜಿಲ್ಲಾಡಳಿತದ ಅಧಿಕಾರಿಗಳು ಉಪಸ್ಥಿತರಿದ್ದರು.

## ಬೀದಿ ಬದಿ ಕಂಪ್ಯೂಟರ್ ಅಂಗಡಿಗಳ ಸಂಘದಿಂದ ಅನಿರ್ದಿಷ್ಟಾವಧಿ ಧರಣಿ

**ನೈಋತ್ಯ ದೆಸೆ ನ್ಯೂಸ್**

**ಲಿಂಗಸಗೂರು: ಬೀದಿಬದಿ ಕಂಪ್ಯೂಟರ್ ಅಂಗಡಿಗಳನ್ನು ತೆರವುಗೊಳಿಸಲು ಮುಂದಾಗಿರುವ ತಾಲೂಕು ಆಡಳಿತದ ಕ್ರಮವನ್ನು ಖಂಡಿಸಿ ಬೀದಿಬದಿ ಕಂಪ್ಯೂಟರ್ ಅಂಗಡಿಗಳ ಸಂಘದ ಕಾರ್ಯಕರ್ತರು ಸಹಾಯಕ ಆಯುಕ್ತರ ಕಛೇರಿ ಆವರಣದಲ್ಲಿ ಅನಿರ್ದಿಷ್ಟಾವಧಿ ಧರಣಿ ನಡೆಸಿದರು.**

ಈ ಸಂದರ್ಭದಲ್ಲಿ ಮಾತನಾಡಿದ ಸಂಘದ ಕಾರ್ಯಕರ್ತರು ನಾವುಗಳು ವಿದ್ಯಾವಂತ ನಿರುದ್ಯೋಗಿ ಗಳಾಗಿದ್ದು ಜೀವನೋಪಾಯಕ್ಕಾಗಿ ಹಾಗೂ ನಮ್ಮ ಕುಟುಂಬದ ನಿರ್ವಹಣೆಗಾಗಿ ಬಹುದಿನಗಳಿಂದ ಬೀದಿಬದಿಯಲ್ಲಿ ಕಂಪ್ಯೂಟ-ರ್ ಅಂಗಡಿಗಳನ್ನಿಟ್ಟುಕೊಂಡು ಜೀವನೋಪಾಯ ಸಾಗಿಸುತ್ತಿದ್ದೇವೆ. ಸುಮಾರು 30 ವರ್ಷಗಳಿಂದ ನೂರಾರು ಕುಟುಂಬಗಳು ಈ ಬೀದಿಬದಿ ಕಂಪ್ಯೂಟರ್ ಅಂಗಡಿಗಳಿಂದಲೇ ಬದುಕು ಸಾಗಿಸುತ್ತಿದ್ದೇವೆ. ಸರ್ಕಾರ ವ್ಯಾಪಾರಿಗಳೆಂದು ಗುರುತಿನ ಚೀಟಿ ನೀಡಿದ್ದಾರೆ ಇನ್ನು ಕೆಲವರಿಗೆ ಪುರಸಭೆ ನಿರಾಪೇಕ್ಷಣೆ ಪತ್ರವನ್ನು ನೀಡಿರುತ್ತಾರೆ.

ಗುರುತಿನ ಚೀಟಿ ಪಡೆದ ವ್ಯಾಪಾ-ರಿಗಳು ಬ್ಯಾಂಕ್ ಗಳಲ್ಲಿ ಸಾಲ ಪಡೆದು ಕೊಂಡಿದ್ದಾರೆ. ಅಂಗಡಿ ತೆರವುಗೊಳಿಸುವುದ-ರಿಂದ ಸಾಲ ಮರುಪಾವತಿ ಮಾಡಲು ಹೇಗೆ ಸಾಧ್ಯ. ಏಕಾಏಕಿ ವಿದ್ಯುತ್ ಸಂಪರ್ಕವನ್ನು



ಕಡಿತಗೊಳಿಸಲು ಹಾಗೂ ಅಂಗಡಿ ಗಳನ್ನು ತೆರವುಗೊಳಿಸಲು ಪುರಸಭೆ ಹಾಗೂ ಚೆಸ್ಕಾಂ ಇಲಾಖೆಯವರು ನೋಟೀಸ್‌ಗಳನ್ನು ನೀಡಿದ್ದಾರೆ. ತೆರವುಗೊಳಿಸಿದರೆ ಬೀದಿಪಾಲಾಗುತ್ತವೆ. ಬೀದಿ ವ್ಯಾಪಾರಿಗಳ ಜೀವನೋಪಾಯ ಮತ್ತು ನಿಯಂತ್ರಣ ವೇಳೆ ಅಂಗಡಿಗಳನ್ನು ಕುಟುಂಬಗಳು ಕಾಯ್ದೆ -2014 ರ ಪ್ರಕಾರ, ಕೂಡಲೇ ಬೀದಿ ಬದಿ ಮಾರಾಟಗಾರರ ವ್ಯಾಪಾರಕ್ಕೆ ರಕ್ಷಣೆ ಒದಗಿಸಬೇಕು. ಲಿಂಗಸಗೂರು ಪಟ್ಟಣದ ಬೀದಿಬದಿ ಕಂಪ್ಯೂಟರ್ ಅಂಗಡಿಗಳ ಸಮೀಕ್ಷೆ ನಡೆಸಬೇಕು.

ಎಲ್ಲಾ ಬೀದಿ ಮಾರಾಟಗಾರ-ರಿಗೆ ಬೀದಿ ವ್ಯಾಪಾರದ ಲೈಸನ್ಸ್ ನೀಡಬೇಕು. ಕೂಡಲೇ ತೆರವು ಕಾರ್ಯಾಚರಣೆ ನಿಲ್ಲಿಸಬೇಕು. ಪುರಸಭೆ ಹಾಗೂ ಚೆಸ್ಕಾಂ ಒತ್ತಡಹಾಕುತ್ತಿರುವುದನ್ನು ಕೂಡಲೇ ನಿಲ್ಲಿಸಬೇಕು. ಪ್ರಸ್ತುತ ಅಂಗಡಿಗಳನ್ನು ತೆರವುಗೊಳಿಸುವುದಾದಲ್ಲಿ ಪರ್ಯಾಯ ವ್ಯವಸ್ಥೆ ಕಲ್ಪಿಸಬೇಕು. ಪರ್ಯಾಯ ವ್ಯವಸ್ಥೆ ಕಲ್ಪಿಸುವವರೆಗೂ ಅಂಗಡಿಗಳನ್ನು ಯತಸ್ಥಿತಿಯಲ್ಲಿ ಮುಂದುವರೆಸಬೇಕು. ಮೇಲ್ಕಂಡ ಕ್ರಮಗಳ ವ್ಯಾಪಾರಸ್ಥರಿಗೆ ಭಾರತದ ಸಂವಿಧಾನ ವಿಧಿ 21 ಅಡಿಯಲ್ಲಿ ಜೀವನೋಪಾಯದ ಹಕ್ಕನ್ನು ಖಚಿತಪಡಿಸಬೇಕೆಂದು ಸಂಘ ಮತ್ತೊಮ್ಮೆ ಒತ್ತಾಯಿಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಅಮರಯ್ಯ ಘಂಟಿ,

ಉಪಾಧ್ಯಕ್ಷ ಬಸವರಾಜ ಗುಂಟಿ, ಕಾರ್ಯದರ್ಶಿ ಚೆನ್ನವಿರಯ್ಯ, ಖಜಾಂಚಿ ವಿಜಯ ಸಿಂಗ್, ಕಾನೂನು ಸಲಹೆಗಾರ ಮಹ್ಮದ್ ಅಜಾರ್, ಕರವೇ ಅಧ್ಯಕ್ಷ ಹನುಮಂತ ನಾಯಕ, ರೈತ ಸಂಘದ ಜಿಲ್ಲಾಧ್ಯಕ್ಷ ಶಿವಪುತ್ರಗೌಡ ನಂದಿಹಾಳ, ಸಿಪಿಐಎಂಎಲ್ (ರೆಡ್ ಸ್ಟಾರ್) ಆದೇಶ ನಗನೂರು, ಚಿದಾನಂದ, ದಸಂಸ ಮುಖಂಡರಾದ ದುರುಗಪ್ಪ ಅಗ್ರಹಾರ, ಮೌನೇಶ ಗೋರೆಬಾಳ, ಚಂದ್ರಶೇಖರ ಗೋರೆಬಾಳ, ಬಸವರಾಜ ಕುಣೆಕೆಲ್ಲೂರು ಹಾಗೂ ಬೀದಿ ಬದಿ ಕಂಪ್ಯೂಟರ್ ಅಂಗಡಿಗಳ ಸಂಘದ ನೂರಾರು ಸದಸ್ಯರು ಇದ್ದರು.

## ಕಾರ್ಮಿಕ ಇಲಾಖೆಯಿಂದ ವಿವಿಧ ಸೌಲಭ್ಯಗಳ ಲಭ್ಯ: ಕಾರ್ಮಿಕ ಅಧಿಕಾರಿ ಆರತಿ

**ನೈಋತ್ಯ ದೆಸೆ ನ್ಯೂಸ್**

**ರಾಯಚೂರು: ಕಾರ್ಮಿಕ ಇಲಾಖೆಯು ಕಾರ್ಮಿಕರ ಕಲ್ಯಾಣ, ಸಾಮಾಜಿಕ ಭದ್ರತೆ ಮತ್ತು ಕೈಗಾರಿಕಾ ಶಾಂತಿಯನ್ನು ಕಾಪಾಡುವ ಪ್ರಮುಖ ಸರ್ಕಾರಿ ಸಂಸ್ಥೆಯಾಗಿದೆ. ಅಸಂಘಟಿತ ಮತ್ತು ಸಂಘಟಿ-ತ ಕಾರ್ಮಿಕರ ಹಕ್ಕುಗಳ ರಕ್ಷಣೆ, ಕನಿಷ್ಠ ವೇತನ ಜಾರಿ, ಬಾಲಕಾರ್ಮಿಕ ಪದ್ಧತಿ ನಿರ್ಮೂಲನೆ ಮತ್ತು ಕಾರ್ಮಿಕ ಕಾಯ್ದೆಗಳ ಅನುಷ್ಠಾನವನ್ನು ನಿರ್ವಹಿಸುತ್ತಿದ್ದು, ಕಾರ್ಮಿಕರು ಇಲಾಖೆಯ ಅಧಿಕೃತ ವೆಬ್‌ಸೈಟ್ ಮೂಲಕ ನೋಂದಣಿ ಮತ್ತು ವಿವಿಧ ಸೇವೆಗಳನ್ನು ಪಡೆಯಬಹುದಾಗಿದೆ ಎಂದು ಜಿಲ್ಲಾ ಕಾರ್ಮಿಕ ಅಧಿಕಾರಿಗಳಾದ ಆರತಿ ಅವರು ತಿಳಿಸಿದ್ದಾರೆ.**

ಯೋಜನೆಗಳು, ಸೌಲಭ್ಯಗಳು: ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ 18 ರಿಂದ 60 ವರ್ಷದೊಳಗಿರುವ ಕಳೆದ 12 ತಿಂಗಳಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ಕನಿಷ್ಠ 90 ದಿನಗಳ ಕೆಲಸ ನಿರ್ವಹಿಸಿರಬೇಕು. ನೋಂದಣಿ ಶುಲ್ಕ 100 ರೂಪಾಯಿ ಹಾಗೂ ನವೀಕರಣ ಶುಲ್ಕ 50ರೂ. ಶೈಕ್ಷಣಿಕ ಧನಸಹಾಯ, ಮದುವೆ ಧನಸಹಾಯ, ವೈದ್ಯಕೀಯ ಧನಸಹಾಯ, ಪ್ರಮುಖ ವೈದ್ಯಕೀಯ ಧನ ಸಹಾಯ, ಹೆರಿಗೆ ಸೌಲಭ್ಯ, ತಾಯಿ ಮಗು ಸಹಾಯ ಹಸ್ತ, ಅಂತ್ಯಕ್ರಿಯೆ ವೆಚ್ಚ ಮತ್ತು ಅನುಗ್ರಹರಾಶಿ ಪರಿಹಾರ, ಪಿಂಚಣಿ ಸೌಲಭ್ಯ, ಕುಟುಂಬ ಪಿಂಚಣಿ ಸೌಲಭ್ಯ, ದುರ್ಬಲತೆ ಪಿಂಚಣಿ ಸೌಲಭ್ಯ, ಅಪಘಾತ ಪರಿಹಾರ, ಟೂಲ್ ಕಿಟ್ ಸೌಲಭ್ಯ, ಶ್ರಮಿಕ ಸಂಜೀವಿನಿ ಸಂಚಾರಿ ಚಿಕಿತ್ಸಾಲಯ ಪಡೆಯಬಹುದಾಗಿದೆ.

ವಿವಿಧ ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ಅಂಬೇಡ್ಕರ್ ಕಾರ್ಮಿಕ ಸಹಾಯ ಹಸ್ತ ಯೋಜನೆ: ಯೋಜನೆಗೆ ಅರ್ಹ ಅಭ್ಯರ್ಥಿಗಳು 18 ರಿಂದ 60 ವರ್ಷದೊಳಗಿರಬೇಕು. ಪ್ರಸ್ತುತ 101 ವರ್ಗಗಳ ಅಸಂಘಟಿತ ಕಾರ್ಮಿಕರಿಗೆ ಅನ್ವಯಿಸುತ್ತದೆ. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇ.ಎಸ್.ಐ ಮತ್ತು ಇ,ಪಿ.ಎಫ್ ಸೌಲಭ್ಯ ಹೊಂದಿರಬಾರದು. ಇವರಿಗೆ ನೋಂದಣಿ ಹಾಗೂ ನವೀಕರಣ ಶುಲ್ಕ ಉಚಿತವಾಗಿದೆ. ಕರ್ನಾಟಕ ರಾಜ್ಯ ಮೋಟರು ಸಾರಿಗೆ ಮತ್ತು ಇತರ ಸಂಬಂಧಿತ ಕಾರ್ಮಿಕರ ಸಾಮಾಜಿಕ ಭದ್ರತೆ ಮತ್ತು ಕ್ಷೇಮಾಭಿವೃದ್ಧಿ ಮಂಡಳಿ: ವಯೋಮಿತಿ 18 ರಿಂದ 60 ವರ್ಷದೊಳಗಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಇ.ಎಸ್.ಐ ಮತ್ತು ಇ.ಪಿ.ಎಫ್ ಫಲಾನುಭವಿಗಳಾಗಿರಬಾರದು.

ಯೋಜನೆಯ ಸೌಲಭ್ಯಗಳು ಕರ್ತವ್ಯದಲ್ಲಿರುವಾಗ ಹಾಗೂ ಇಲ್ಲದಿರುವಾಗಲೂ ಸಹ ಲಭ್ಯವಾಗುತ್ತದೆ ನೋಂದಣಿ ಹಾಗೂ ನವೀಕರಣ ಶುಲ್ಕ 50ರೂ. ಆಗಿದೆ. ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ಕರ್ನಾಟಕ ರಾಜ್ಯ ಗಿಗ್ ಕಾರ್ಮಿಕರ ವಿಮಾ ಯೋಜನೆ: ವಯೋಮಿತಿ 18 ರಿಂದ 60 ವರ್ಷದೊಳಗಿರಬೇಕು. ಆದಾಯ ತೆರಿಗೆ ಪಾವತಿ-ದಾರರಾಗಿರಬಾರದು. ಇ.ಎಸ್.ಐ ಮತ್ತು ಇ.ಪಿ.ಎಫ್ ಫಲಾನುಭವಿಗಳಾಗಿರಬಾರದು. ಕರ್ನಾಟಕದಲ್ಲಿ ಗಿಗ್ ವೃತ್ತಿ (ಡೆಲಿವರಿ) ನಿರ್ವಹಿಸುತ್ತಿರುವವರಿಗೆ ಮಾತ್ರ ನೋಂದಣಿ ಹಾಗೂ ನವೀಕರಣ ಶುಲ್ಕ ಉಚಿತವಾಗಿದೆ.

ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ

**ಕಾರ್ಮಿಕ ಇಲಾಖೆ**
**ಕರ್ನಾಟಕ ಸರ್ಕಾರ**

ಯಾವುದೇ ಶುಲ್ಕ ಇರುವುದಿಲ್ಲ. ಕರ್ನಾಟಕ ರಾಜ್ಯ ದಿನಪತ್ರಿಕೆ ವಿತರಣಾ ಕಾರ್ಮಿಕರ ಅಪಘಾತ ಪರಿಹಾರ ಮತ್ತು ವೈದ್ಯಕೀಯ ಸೌಲಭ್ಯ ಯೋಜನೆ: ವಯೋಮಿತಿ 18 ರಿಂದ 59 ವರ್ಷದೊಳಗಿರಬೇಕು. ಆದಾಯ ತೆರಿಗೆ ಪಾವತಿ-ದಾರರಾಗಿರಬಾರದು. ಇ.ಎಸ್.ಐ ಮತ್ತು ಇ.ಪಿ.ಎಫ್ ಫಲಾನುಭವಿಗಳಾಗಿರಬಾರದು ನೋಂದಣಿ ಹಾಗೂ ನವೀಕರಣ ಶುಲ್ಕ ಉಚಿತವಾಗಿದೆ. ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ಪ್ರಧಾನ ಮಂತ್ರಿ ಶ್ರಮಯೋಗಿ ಮಾನ್ ಧನ್ ಯೋಜನೆ: ಯೋಜನೆಯಡಿ 18 ರಿಂದ 40 ವರ್ಷದೊಳಗಿರಬೇಕು. ಮಾಸಿಕ ಆದಾಯ 15,000 ರೂ. ಅಥವಾ ಅದಕ್ಕಿಂತ ಕಡಿಮೆ ಇರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು.

ಇ.ಎಸ್.ಐ/ಇ.ಪಿ.ಎಫ್/ಎನ್.ಪಿ.ಎಸ್ ಯೋಜನೆಯ ಫಲಾನುಭವಿಗಳಾಗಿರಬಾರದು ವಯಸ್ಸಿನ ಆಧಾರಿತ ಮಾಸಿಕ ವಂತಿಕೆಯನ್ನು ಪಾವತಿಸಿದ ಅಸಂಘಟಿತ ವಲಯದ ಕಾರ್ಮಿಕ-ರಿಗೆ 60 ವರ್ಷ ಪೂರ್ಣಗೊಂಡ ನಂತರ ಮಾಸಿಕ ನಿಶ್ಚಿತ 3000 ರೂ.ಗಳ ಪಿಂಚಣಿ ಸೌಲಭ್ಯ ದೊರೆಯುತ್ತದೆ. (ವಯೋಮಿತಿ ಆದಾರದ 55 ರಿಂದ 200 ರೂಪಾಯಿ) ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ವ್ಯಾಪಾರಿಗಳು ಹಾಗೂ ಸ್ವಯಂ ಉದ್ಯೋಗಿಗಳಿಗೆ ರಾಷ್ಟ್ರೀಯ ಪಿಂಚಣಿ ಯೋಜನೆ: 18 ರಿಂದ 40 ವರ್ಷದೊಳಗಿರಬೇಕು. ವಾರ್ಷಿಕ ವಹಿವಾಟು ಗ-ರಿಷ್ಠ 1.50 ಕೋಟಿ ರೂ.ಗಳ ಒಳಗಿರಬೇಕು.

ಆದಾಯ ತೆರಿಗೆ ಪಾವತಿ-ದಾರರಾಗಿರಬಾರದು. ಇ.ಎಸ್.ಐ/ ಇ.ಪಿ.ಎಫ್/ ಎನ್.ಪಿ.ಎಸ್/ಪಿಎಂಎಸ್‌ವೈ ಎಂ/ ಪಿ.ಎಂ.ಕೆ.ಎಂ.ವೈ. ಯೋಜನೆಯ ಫಲಾನುಭವಿಗಳಾಗಿರಬಾರದು. (ವಯೋಮಿತಿ ಆದಾರದ 55 ರಿಂದ 200 ರೂಪಾಯಿ) ವಯಸ್ಸಿನ ಆಧಾರಿತ ಮಾಸಿಕ ವಂತಿಕೆಯನ್ನು ಪಾವತಿಸಿದ ಅಸಂಘಟಿತ ವಲಯದ ಕಾರ್ಮಿಕರಿಗೆ 60 ವರ್ಷ ಪೂರ್ಣಗೊಂಡ ನಂತರ ಮಾಸಿಕ ನಿಶ್ಚಿತ 3000ರೂ.ಗಳ ಪಿಂಚಣಿ ಸೌಲಭ್ಯ ದೊರೆಯುತ್ತದೆ. ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ಅಸಂಘಟಿತ ಕಾರ್ಮಿಕರ ಸಮಗ್ರ ರಾಷ್ಟ್ರೀಯ ಡೇಟಾಬೇಸ್ ಇ-ಶ್ರಮ್ ಯೋಜನೆ: 16 ರಿಂದ 59 ವಯೋಮಾನದವರಾಗಿರಬೇಕು. ಆದಾಯ ತೆರಿಗೆ ಪಾವತಿದಾರರಾಗಿರಬಾರದು. ಭವಿಷ್ಯನಿಧಿ ಹಾಗೂ ಇ.ಎಸ್.ಐ ಫಲಾನುಭವಿಯಾಗಿರದವರು ಈ ಯೋಜನೆಗೆ ಒಳಪಡಬಹುದಾಗಿದೆ.

ಪ್ರಸ್ತುತ ಒಂದು ವರ್ಷದ ಅವಧಿಗೆ ಪ್ರಧಾನ ಮಂತ್ರಿ ಸುರಕ್ಷಾ ಬಿಮಾ ಯೋಜನೆ ಪ್ರಯೋಜನ ಪಡೆಯಬಹುದು (ಅಪಘಾತದಿಂದ ಮರಣ ಹೊಂದಿದಲ್ಲಿ ಅಥವಾ ಶಾಶ್ವತ ದುರ್ಬಲತೆ ಹೊಂದಿದಲ್ಲಿ 2 ಲಕ್ಷ ರೂ. ಹಾಗೂ ಭಾಗಶಃ ಅಂಗವೈಕಲ್ಯಕ್ಕೆ 1 ಲಕ್ಷ ರೂ. ಪರಿಹಾರವು ಯೋಜನೆಯಡಿ ಇರುತ್ತದೆ. ನೋಂದಣಿ ಹಾಗೂ ನವೀಕರಣ ಶುಲ್ಕ ಉಚಿತವಾಗಿದೆ. ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ. ಕರ್ನಾಟಕ ರಾಜ್ಯ ಕಾರ್ಮಿಕರ ಕಲ್ಯಾಣ ಮತ್ತು ಸಾಮಾಜಿಕ ಭದ್ರತಾ (ಆಶಾದೀಪ) ಸೊಸೈಟಿ: ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ನೇಮಕಾತಿ ಮಾಡಿಕೊಳ್ಳುವುದುನ್ನು ಉತ್ತೇಜಿಸಲು,

ನೇಮಕಾತಿ ಮಾಡಿಕೊಂಡ ಸಂಸ್ಥೆಗೆ ಅಂತಹ ನೌಕರರ ಇ.ಎಸ್.ಐ ಹಾಗೂ ಇ.ಪಿ.ಎಫ್ ವಂತಿಕೆಯನ್ನು ಮರುಪಾವತಿಸುವ ಮೂಲಕ ಆರ್ಥಿಕ ಸಹಾಯ ನೀಡುವುದು ತರಬೇತಿ ಪಡೆಯುವ ಅಪ್ರೆಂಟಿಸ್‌ಗಳಿಗೆ ನೀಡಿದ ಶಿಷ್ಯ ವೇತನವನ್ನು ಮಾಲೀಕರಿಗೆ ಮರು ಪಾವತಿಸುವುದು ಮಾಲೀಕರು ಪಾವತಿಸುವ ಇ.ಎಸ್.ಐ ಮತ್ತು ಇ.ಪಿ.ಎಫ್ ವಂತಿಕೆ ಮರುಪಾವತಿ, ಅಪ್ರೆಂಟಿಸ್ ತರಬೇತಿ ಪಡೆಯುತ್ತಿರುವ ಅಭ್ಯರ್ಥಿಗಳ ಶಿಷ್ಯವೇತನ ಮರುಪಾವತಿ, ಅಪ್ರೆಂಟಿಸ್ ತರಬೇತಿ ನಂತರ ಖಾಯಂ ಮಾಡಿಕೊಂಡಲ್ಲಿ ವೇತನ ಮರು ಪಾವತಿ, ಹೊಸದಾಗಿ ಖಾಯಂ ಹುದ್ದೆಗೆ ನೇಮಕಗೊಂಡ ಅಭ್ಯರ್ಥಿಗಳ ವೇತನ ಮರು ಪಾವತಿ ಯೋಜನೆಗಳು ಇರುತ್ತದೆ. ನೋಂದಣಿ ಹಾಗೂ ನವೀಕರಣ ಶುಲ್ಕ ಉಚಿತವಾಗಿದೆ. ಸೌಲಭ್ಯಗಳ ಅರ್ಜಿ ಸಲ್ಲಿಸುವಿಕೆಗೆ ಯಾವುದೇ ಶುಲ್ಕ ಇರುವುದಿಲ್ಲ ಎಂದು ರಾಯಚೂರು ಜಿಲ್ಲಾ ಕಾರ್ಮಿಕ ಅಧಿಕಾರಿ ಆರತಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

OWNER, PUBLISHER, PRINTER BY IRFAN K H NO. 3/117, BALAGANUR, SINDHANOOR, RAICHUR-584138 KARNATAKA AND PRINTED AT SHIVANI PRINTERS, HULKOTI, NEW COURT, OPPOSITE PLOT NO. 28 RS NO. 312/3B, GARAG COMPLEX, GADAG-582101 KARNATAKA, EDITOR BY: IRFAN K PH NO.